# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ



No.1 Leading in Local News Paper
80,000
HAMPI TIMES E-PAPER READERS
94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



ಸಂಪುಟ:02 • ಸಂಚಿಕೆ: 30 • ನೋಂದಣಿ ನಂ.:KARKAN/2023/88055 • ವಿಜಯನಗರ • 25.07.2024 • ಗುರುವಾರ • ಪುಟ:04 • ಬೆಲೆ:2
Volume:02 • Issue: 30 • Reg.No:KARKAN/2023/88055 • VIJAYANAGARA • 25.07.2024 • Thursday • Page:04 • Rs:2



ಮನಸ್ಸು ಮಾಡು ಕರ್ತವ್ಯ ನಿಷ್ಠನಾಗು ಕಾದು ನೋಡು

ಪುಟ: 4ರಲ್ಲಿ ನೋಡಿ

ಈ ಬಾರಿ SSLC ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ!
ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸಲು ಸುಲಭ ಮಾರ್ಗೋಪಾಯಗಳು
ದಿನಕ್ಕೊಂದು ವಿಷಯ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ
SSLC ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿನ ದಿನಕ್ಕೊಂದು ವಿಷಯಗಳನ್ನು ಓದಿಕೊಂಡು ಪರೀಕ್ಷೆಗೆ ಸಿದ್ಧಗೊಳ್ಳಲು ಹಂಪಿ ಟೈಮ್ಸ್ ಮಾರ್ಗದರ್ಶಿ ಸಹಕಾರಿಯಾಗಲಿದೆ... ಇ-ಪೇಪರ್‌ನಲ್ಲೂ ಲಭ್ಯ...

ಹಂಪಿ ಟೈಮ್ಸ್ ಇ-ಪೇಪರ್

94486 33038 www.hampitimes.com / epaper.hampitimes.com Vijayanagara hampitimes@gmail.com



ಹಂಪಿ ಟೈಮ್ಸ್ ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com


# ವರ್ಗಾವಣೆ ವಂಚಿತ ಶಿಕ್ಷಕರಿಂದ ಡಿಡಿಪಿಐ ಕಚೇರಿ ಎದುರು ಪ್ರತಿಭಟನೆ

## ಪಿಎಸ್‌ಟಿ ಶಿಕ್ಷಕರನ್ನು ಜಿಪಿಟಿ ಹುದ್ದೆಗಳಿಗೆ ವರ್ಗಾಯಿಸಲು ಆಗ್ರಹ



■ ಹಂಪಿ ಟೈಮ್ಸ್ ಹೊಸಪೇಟೆ

ಸಾಮಾನ್ಯ ವರ್ಗಾವಣೆಯಲ್ಲಿ ಅವಕಾಶ ವಂಚಿತ ವಿಜಯನಗರ ಜಿಲ್ಲೆಯ ಪ್ರಾಥಮಿಕ ಶಾಲಾ ಶಿಕ್ಷಕರು ಹೊಸಪೇಟೆಯ ಡಿಡಿಪಿಐ ಕಚೇರಿಯ ಶಿಕ್ಷಕರ ವರ್ಗಾವಣೆ ಕೌನ್ಸಲಿಂಗ್ ಸೆಂಟರ್ ಎದುರು ಬುಧವಾರ ಸಂಜೆ ದಿಢೀರ್ ಪ್ರತಿಭಟನೆ ನಡೆಸಿದರು.

ಜಿಲ್ಲಾ ವ್ಯಾಪ್ತಿಯ ವಿವಿಧೆಡೆ ವರ್ಗಾವಣೆ ಬಯಸಿ 850 ಪ್ರಾಥಮಿಕ ಶಾಲಾ ಶಿಕ್ಷಕರು ಅರ್ಜಿ ಸಲ್ಲಿಸಿದ್ದರು. ಆದರೆ, ಜಿಲ್ಲಾ ವ್ಯಾಪ್ತಿಯಲ್ಲಿ ಸಾಮಾನ್ಯ ಕನ್ನಡ ಶಿಕ್ಷಕರಿಗೆ ಖಾಲಿ ಸ್ಥಾನಗಳು ಲಭ್ಯವಿಲ್ಲದೇ, 700ಕ್ಕಿಂತ ಹೆಚ್ಚು ಶಿಕ್ಷಕರು ಕೌನ್ಸಲಿಂಗ್ ಬಹಿಷ್ಕರಿಸಿ ಪ್ರತಿಭಟನೆ ನಡೆಸಿದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಬಸವರಾಜ್ ಸಂಗಪ್ಪನವರ ಮಾತನಾಡಿ, 2017ರ ಸಿ ಅಂಡ್ ಆರ್ ನಿಯಮ ತಿದ್ದುಪಡಿಯಿಂದ ಜಿಪಿಟಿ ಮತ್ತು ಪಿಎಸ್‌ಟಿ ಎಂಬ ಶಿಕ್ಷಕರ ಹುದ್ದೆಯ ಪದನಾಮ ಸೃಷ್ಟಿಸಲಾಗಿದೆ. ಜಿಪಿಟಿ ಶಿಕ್ಷಕರನ್ನು 6 ರಿಂದ 8ನೇ ತರಗತಿಗೆ ಎಂದು ಸೂಚಿಸುವ ಮೂಲಕ ಪಿಎಸ್‌ಟಿ ಶಿಕ್ಷಕರನ್ನು ಹಿಂಬಡ್ತಿಗೆ ತಳ್ಳಿದೆ. ಸದ್ಯ ಜಿಲ್ಲೆಯಲ್ಲಿ ಜಿಪಿಟಿ 411, ಪಿಎಸ್‌ಟಿ–ಇಂಗ್ಲಿಷ್ 142 ಹುದ್ದೆಗಳು ಖಾಲಿಯಿವೆ. 2002ರಿಂದ ಪಿಎಸ್‌ಟಿ ಇಂಗ್ಲಿಷ್ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿಲ್ಲ. ಇತ್ತೀಚೆಗೆ ಬಳ್ಳಾರಿ ಜಿಲ್ಲೆಯಿಂದ ವಿಜಯನಗರಕ್ಕೆ ಅಭಿಮತ ವರ್ಗಾವಣೆ ಅವಕಾಶ ಕಲ್ಪಿಸಿದ್ದರಿಂದ ಇಲ್ಲಿದ್ದ 70 ಹುದ್ದೆಗಳು ಭರ್ತಿಯಾಗಿದೆ. ಹೀಗಾಗಿ ಸ್ಥಳೀಯ ಪಿಎಸ್‌ಟಿ ಶಿಕ್ಷಕರಿಗೆ ವರ್ಗಾವಣೆಗೆ ಅವಕಾಶವಿಲ್ಲದಂತಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

**700ಕ್ಕಿಂತ ಹೆಚ್ಚು ಶಿಕ್ಷಕರು ಕೌನ್ಸಲಿಂಗ್ ಬಹಿಷ್ಕರಿಸಿ ಪ್ರತಿಭಟನೆ**

ಪ್ರಾಥಮಿಕ ಶಾಲಾ ಶಿಕ್ಷಕರಲ್ಲಿ ಜಿಪಿಟಿ ಮತ್ತು ಪಿಎಸ್‌ಟಿ ವಿಭಜನೆಯಿಂದ ಪಿಎಸ್‌ಟಿ ಶಿಕ್ಷಕರಿಗೆ ಸೇವಾ ಹಿರಿತನವಿದ್ದರೂ, ಮುಖ್ಯಗುರು, ಪ್ರೌಢ ಶಾಲಾ ಶಿಕ್ಷಕರಾಗಿ ಮುಂಬಡ್ತಿ ಪಡೆಯುವಂತಿಲ್ಲ. ಈ ಹಿನ್ನೆಲೆಯಲ್ಲಿ ಸಿ ಅಂಡ್ ಆರ್ ನಿಯಮವನ್ನು ಮತ್ತೆ ತಿದ್ದುಪಡಿ ಮಾಡಿ, ಪಿಎಸ್‌ಟಿ ಶಿಕ್ಷಕರಿಗೆ ನ್ಯಾಯ ಒದಗಿಸಬೇಕು. ವಿಶೇಷ ಪ್ರಕರಣವನ್ನಾಗಿ ಪರಿಗಣಿಸಿ ವಿಜಯನಗರ ಜಿಲ್ಲೆಯಲ್ಲಿ ಖಾಲಿಯಿರುವ ಜಿಪಿಟಿ ಹುದ್ದೆಗಳಿಗೆ ಪಿಎಸ್‌ಟಿ ಶಿಕ್ಷಕರ ವರ್ಗಾವಣೆಗೆ ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಶಿವಾನಂದ ಬಿ.ಬಿ., ತಾಲೂಕಾಧ್ಯಕ್ಷ ಬಸವರಾಜ ಕೆ., ಲೋಕಪ್ಪ, ಪ್ರಮುಖರಾದ ಹೀರಾ ನಾಯ್ಕ, ರಾಮಣ್ಣ, ಹನುಮಂತಪ್ಪ ಎಸ್.ಬಸವರಾಜ, ವಿಶ್ವನಾಥ, ಪ್ರಕಾಶ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ವಿಶೇಷ

# ಹಂಪೆಯ ಬಾಲಕೃಷ್ಣ ಮರು ಶೋಧನೆ

ಹಂಪೆಯಲ್ಲಿರುವ ಬಾಲಕೃಷ್ಣ ಅಥವಾ ಕೃಷ್ಣಸ್ವಾಮಿ ದೇವಾಲಯವು ವಿಜಯನಗರ ಅರಸರ ಕಾಲದ ಒಂದು ಸುಪ್ರಸಿದ್ಧ ದೇವಾಲಯ. ವೈಭವದ ದೃಷ್ಟಿಯಲ್ಲಿ, ವಿರೂಪಾಕ್ಷ ಮತ್ತು ವಿಜಯವಿಠಲ ದೇವಾಲಯಗಳ ನಂತರದ ಸ್ಥಾನ ಈ ಬಾಲಕೃಷ್ಣ ದೇವಾಲಯಕ್ಕೆ ಸಲ್ಲುತ್ತದೆ. ಈ ಮಾತಿಗೆ ಪೂರಕವಾಗಿ ಅನೇಕ ಶಾಸನಗಳು ಮತ್ತು ಐತಿಹ್ಯಗಳು ಬೆಂಬಲವಾಗಿ ನಿಲ್ಲುತ್ತವೆ. >> 3



– ಪ್ರೊ.ಡಿ.ವಿ.ಪರಮಶಿವಮೂರ್ತಿ
ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ

ಮೈಕ್ರೋ ನ್ಯೂಸ್

## ನದಿಗೆ ನೀರು ಹಂಪಿ ಕೆಲ ಸ್ಮಾರಕಗಳು ಜಲಾವೃತ



ಹಂಪಿ ಟೈಮ್ಸ್ ಹೊಸಪೇಟೆ

ಟಿಬಿಡ್ಯಾಂ ನ ಹತ್ತು ಕ್ರಸ್ಟ್ ಗೇಟುಗಳನು ಒಂದು ಅಡಿ ನದಿಗೆ ನೀರು ಬಿಟ್ಟಿದ್ದರಿಂದ ಹಂಪಿಯ ಕೆಲ ಸ್ಮಾರಕಗಳು ಜಲಾವೃತಗೊಂಡಿವೆ. ಎಸಿ ವಿವೇಕಾನಂದ ತಹಸಿಲ್ದಾರ್ ವಿಶ್ವಜಿತ್ ಮೇಹತ ಇತರ ಅಧಿಕಾರಿಗಳು, ಗ್ರಾಪಂ ಸದಸ್ಯರು, ಪಿಡಿಓ ಭೇಟಿ ನೀಡಿ ಪರಿಶೀಲಿಸಿದರು



## ಇಂದು ತಾಲೂಕು ಕಾ.ನಿ.ಪ.ದಿಂದ ಪತ್ರಿಕಾ ದಿನಾಚರಣೆ

ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ



ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ತಾಲೂಕು ಘಟಕದಿಂದ ಪತ್ರಿಕಾ ದಿನಾಚರಣೆಯನ್ನು ಜು.25 ರಂದು ಪಟ್ಟಣದ ಶ್ರೀಕನ್ನಿಕಾ ಪರಮೇಶ್ವರಿ ಕಲ್ಯಾಣ ಮಂಟಪದಲ್ಲಿ ಬೆಳಗ್ಗೆ 10.30ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಘಟಕದ ಅಧ್ಯಕ್ಷ ಉಮಾಪತಿ ಶೆಟ್ಟರ್ ತಿಳಿಸಿದರು.

ಶಾಸಕ ಕೆ.ನೇಮಿರಾಜ್‌ನಾಯ್ಕ್ ಉದ್ಘಾಟಿಸಲಿದ್ದು, ಸಂಘದ ವಿಜಯನಗರ ಜಿಲ್ಲಾಧ್ಯಕ್ಷ ಪಿ.ಸತ್ಯನಾರಾಯಣ ಪಾಲ್ಗೊಳ್ಳಲಿದ್ದು, ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಹಾಯಕ ಕುಲಸಚಿವರಾದ ಎಂ.ಎಂ.ಶಿವಪ್ರಕಾಶ್ ಉಪನ್ಯಾಸ ನೀಡಲಿದ್ದಾರೆ. ವಿಶೇಷವಾಗಿ ಆಂಬುಲೆನ್ಸ್ ಚಾಲಕರ ಸಾರ್ಥಕ ಸೇವೆ ಗುರುತಿಸಿ ಸನ್ಮಾನಿಸಿ ಗೌರವಿಸಲಾಗುವುದು ಎಂದು ತಿಳಿಸಿದ್ದಾರೆ.

# ತುಂಗಭದ್ರಾ ಹಿನ್ನೀರಿನ ಪ್ರದೇಶಕ್ಕೆ ಜಿಪಂ ಉಪ ಕಾರ್ಯದರ್ಶಿ ಭೇಟಿ ಪರಿಶೀಲನೆ

■ ಹಂಪಿ ಟೈಮ್ಸ್ ಹೊಸಪೇಟೆ

ವಿಜಯನಗರ ಜಿಲ್ಲಾ ಪಂಚಾಯತ್‌ನ ಉಪ ಕಾರ್ಯದರ್ಶಿ ಭೀಮಪ್ಪ ಲಾಳಿ ಅವರು ಮುತ್ತೂರು ಮತ್ತು ಕಿತ್ತನೂರು ಗ್ರಾಮಗಳ ಹಿನ್ನೀರಿನ ಪ್ರದೇಶಗಳಿಗೆ ಜುಲೈ 24ರಂದು ಭೇಟಿ ನೀಡಿದರು.



ಈ ವೇಳೆ ನೀರಿನ ಮಟ್ಟ ವೀಕ್ಷಿಸಿ, ಬಳಿಕ ಎರಡು ಗ್ರಾಮಗಳ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದರು. ತುಂಗಭದ್ರಾ ನದಿಯು ಈಗಾಗಲೇ ರಭಸವಾಗಿ ಹರಿಯುತ್ತಿದ್ದು, ಸಾರ್ವಜನಿಕರುನದಿಯ ತಟದಲ್ಲಿ ಯಾವುದೇ ಚಟುವಟಿಕೆಗಳನ್ನು ನಡೆಸಬಾರದು. ಜಾನುವಾರುಗಳನ್ನು ಮೇಯಿಸಲು ಹೋಗಬಾರದು ಹಾಗೂ ಮಕ್ಕಳು ಈಜಲು ಹೋಗದಂತೆ ಎಚ್ಚರಿಕೆ ವಹಿಸಬೇಕು ಎಂದು ತಿಳಿಸಿದರು.

ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಹರೀಶ್, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಸಿಬ್ಬಂದಿ, ಗ್ರಾಮ ಪಂಚಾಯತ್ ಸದಸ್ಯರು ಸಾರ್ವಜನಿಕರು ಹಾಜರಿದ್ದರು.

# ಹಂಪಿ ದೇವಸ್ಥಾನದ ಹುಂಡಿಗಳಲ್ಲಿ 53.42 ಲಕ್ಷ ರೂ ಸಂಗ್ರಹ

## ಭಕ್ತರ ಕಾಣಿಕೆ ಮೂಲಭೂತ ಸೌಲಭ್ಯ ಪೂಜೆಗೆ ಮೀಸಲು : ಇಒ ಹನುಮಂತಪ್ಪ



■ ಹಂಪಿ ಟೈಮ್ಸ್ ಹೊಸಪೇಟೆ

ಹಂಪಿ ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದ ಆವರಣದಲ್ಲಿನ ಒಟ್ಟು 9 ಕಾಣಿಕೆ ಹುಂಡಿಗಳನ್ನು ಹಿಂದೂ ಧಾರ್ಮಿಕ ದತ್ತಿ ಉಂಬಳಿಗಳ ಇಲಾಖೆ ಅಧಿಕಾರಿಗಳು, ವಿದ್ಯಾರಣ್ಯ ಪೀಠಾಧಿಪತಿ ಶ್ರೀ ವಿದ್ಯಾರಣ್ಯ ಭಾರತಿ ಸ್ವಾಮಿಗಳ ಸಮ್ಮುಖದಲ್ಲಿ ಬುಧವಾರ ಎಣಿಕೆ ಕಾರ್ಯ ನಡೆಸಿದರು. ಎಂಟು ತಿಂಗಳಲ್ಲಿ ಭಕ್ತರು ಹಾಕಿದ ಕಾಣಿಕೆ ಮೊತ್ತ ಒಟ್ಟು 42,55,184 ರೂ.ಗಳಾಗಿದ್ದು, ಇದೇ ಮೊದಲ ಬಾರಿಗೆ ಅತಿಹೆಚ್ಚು ಕಾಣಿಕೆ ಸಂಗ್ರಹವಾಗಿರುವುದು ದಾಖಲೆಯಾಗಿದೆ. ಶ್ರೀ ವಿರೂಪಾಕ್ಷೇಶ್ವರಸ್ವಾಮಿಯ ರಾಜಗೋಪುರ, ರಾಯಗೋಪುರ, ಪ್ರಾಂಗಾಣ, ಪಂಪಾದೇವಿ, ಭುವನೇಶ್ವರಿ, ನವಗ್ರಹ ಹಾಗೂ ವಿರೂಪಾಕ್ಷೇಶ್ವರ ಸ್ವಾಮಿಯ ಒಳಾಂಗಣದಲ್ಲಿನ ಎರಡು ಹುಂಡಿಗಳು ಸೇರಿ ಒಟ್ಟು 9 ಹುಂಡಿಗಳ ಹಣ ಎಣಿಕೆ ಕಾರ್ಯ ನಡೆಯಿತು. ನ.22, 2023 ರಿಂದ ಜು.24, 2024ರವರೆಗಿನ ಕಾಣಿಕೆ ಇದಾಗಿದೆ.

ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದ ಇಒ ಹನುಮಂತಪ್ಪ, ಮಲ್ಲಪ್ಪ, ಪೇದೆ ಸಂಜೀವ್‌ಸಿಂಗ್, ಕೆನರಾ ಬ್ಯಾಂಕಿನ ನೌಕರ ಶಿವಕುಮಾರ ಸೇರಿದಂತೆ ದೇವಸ್ಥಾನದ ಸಿಬ್ಬಂದಿ ಇದ್ದರು.

ಜಿಲ್ಲಾಧಿಕಾರಿಗಳ ನಿರ್ದೇಶನ, ಶ್ರೀ ವಿದ್ಯಾರಣ್ಯ ಭಾರತಿ ಶ್ರೀಗಳು, ಅರ್ಚಕರು ಮತ್ತು ಸಿಬ್ಬಂದಿಗಳ ಸಹಕಾರದಿಂದ ಇದೇ ಮೊದಲ ಬಾರಿಗೆ ದೇವಸ್ಥಾನದ ಹುಂಡಿಗಳಲ್ಲಿ ಎರಡು ದಿನದಲ್ಲಿ ಎಣಿಕೆ ಮಾಡಲಾದ ಒಟ್ಟು 10 ಹುಂಡಿಗಳಲ್ಲಿ 53,42,684 ರೂ. ಅತಿಹೆಚ್ಚು ಕಾಣಿಕೆ ಸಂಗ್ರಹವಾಗಿದೆ. ಹುಂಡಿಯ ಕಾಣಿಕೆಯನ್ನು ದೇವಸ್ಥಾನ ಅಭಿವೃದ್ಧಿಗೆ, ಜಾತ್ರೆ, ವಿಶೇಷ ಪೂಜೆ, ಮೂಲಭೂತ ಸೌಲಭ್ಯಗಳಿಗೆ ಬಳಕೆಯಾಗಲಿದೆ ಎಂದು ದೇವಸ್ಥಾನದ ಇಒ ಹನುಮಂತಪ್ಪ ತಿಳಿಸಿದರು.

# ಹೊಸ ಪ್ರತಿಭೆಗಳು ರಂಗಭೂಮಿಯತ್ತ ಮರಳಬೇಕಿದೆ

## ಶ್ರೀಗುರು ಸಿದ್ದಲಿಂಗೇಶ್ವರ ನಾಟ್ಯ ಸಂಘದ ನಿರ್ದೇಶಕ ಕುಂಬ್ಳೆ ಅಭಿಮತ | ಇಂದಿನಿಂದ ತವರುಬಿಟ್ಟ ತಂಗಿ ನಾಟಕ ಪ್ರದರ್ಶನ

■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ಇಂದು ಯುಟ್ಯೂಬ್, ಮೊಬೈಲ್, ದೂರದರ್ಶನದಂತ ಹಾವಳಿಯಿಂದ ರಂಗಭೂಮಿ ಕಲೆ ನಶಿಸುತ್ತಿದೆ ಎನ್ನುವ ಮಾತುಗಳು ಕೇಳಿ ಬರುತ್ತಿವೆ. ಆದರೆ, ಇದಕ್ಕೆ ಅಪವಾದ ಎನ್ನುವಂತೆ ಹೊಸ ಹೊಸ ಪ್ರತಿಭೆಗಳು ರಂಗಭೂಮಿಯತ್ತ ಮರಳುವಂತಾಗಬೇಕು ಎಂದು ಮಂಡಲಗಿರಿಯ ಶ್ರೀಗುರು ಸಿದ್ದಲಿಂಗೇಶ್ವರ ನಾಟ್ಯ ಸಂಘದ ನಿರ್ದೇಶಕರಾದ ಕುಂಬ್ಳೆಯವರು ತಿಳಿಸಿದರು.




ಪಟ್ಟಣದ ಯು.ಕೆ.ಕೊಟ್ರಬಸಪ್ಪನವರ ಖಾಲಿ ನಿವೇಶನದಲ್ಲಿ ಹಾಕಲಾಗಿರುವ ರಂಗಸಜ್ಜಿಕೆಯಲ್ಲಿ ಆರಂಭವಾಗಲಿರುವ ನಾಟಕಗಳ ಪ್ರದರ್ಶನ ಕುರಿತು ವಿವರಿಸುತ್ತಾ ಮಾತನಾಡಿದರು. ರಂಗಭೂಮಿ ಕಲಾವಿದರಾದ ನಮಗೆ ಬೇರೆ ಉದ್ಯೋಗ ಗೊತ್ತಿಲ್ಲದಿರುವುದರಿಂದ, ಊರಿಂದ ಊರಿಗೆ ಅಲೆದು ಕಂಪನಿ ನಾಟಕಗಳನ್ನು ನಡೆಸುತ್ತಿದ್ದೇವೆ ಎಂದರು.

ವೃತ್ತಿ ರಂಗಭೂಮಿಯಿಂದ ಹೆಸರು, ಜನಪ್ರಿಯತೆ ಸಾಕಷ್ಟು ಇದ್ದರೂ ಸಹ ಆರ್ಥಿಕವಾಗಿ ಹಿಂದುಳಿದಿದ್ದೇವೆ. ನಾಟಕ ಕಂಪನಿಗಳಲ್ಲೇ ನಮ್ಮ ಬದುಕನ್ನು ಕಂಡುಕೊಂಡಿದ್ದೇವೆ. ಜುಲೈ 25ರ ಗುರುವಾರದಿಂದ ಪ್ರತಿದಿನ 2 ಪ್ರದರ್ಶನಗಳಂತೆ ನಮ್ಮ ಪ್ರಥಮ ನಾಟಕ 'ತವರುಬಿಟ್ಟ ತಂಗಿ' ಪ್ರಯೋಗ ಆರಂಭವಾಗಲಿದ್ದು ಮೊದಲನೆ ದಿನ ಮಹಿಳೆಯರಿಗೆ 2 ಶೋಗಳನ್ನು ಉಚಿತವಾಗಿ ತೋರಿಸಲಾಗುತ್ತದೆ. ನಮ್ಮ ನಾಟಕಗಳಲ್ಲಿ ಯಾವುದೇ ಅಶ್ಲೀಲ ಸಂಭಾಷಣೆ, ಅಶ್ಲೀಲ ಭಂಗಿಗಳು ಇರುವುದಿಲ್ಲ. ಎಲ್ಲರು ವೃತ್ತಿ ರಂಗಭೂಮಿಯತ್ತ ತೆರಳಿ ಪ್ರೋತ್ಸಾಹಿಸಿ ಎಂದರು.

ಶ್ರೀ ಗುರು ಸಿದ್ದಲಿಂಗೇಶ್ವರ ನಾಟ್ಯ ಸಂಘದ ಮಾಲೀಕ ಪಂಚಾಕ್ಷರಿ ಮಾತನಾಡಿ, ಮಾಲ್‌ಗಳಲ್ಲಿ ಸಿನಿಮಾ ನೋಡುವ ಜನರು ನಾಟಕಗಳನ್ನು ನಿರ್ಲಕ್ಷಿಸಿದ್ದಾರೆ. ಆದರೆ ನಮ್ಮ ಕಂಪನಿಯಲ್ಲಿ ನೋಡಲು ಬರುವ ಪ್ರೇಕ್ಷಕರಿಗೆ ಫ್ಯಾನ್, ಕೂಲರ್, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇರುತ್ತದೆ. ಸಮೃದ್ಧ ಮಳೆಯಾದರೆ ರೈತಾಪಿ ವರ್ಗ ಖುಷಿಯಿಂದ ಬಂದು ನಾಟಕ ನೋಡುತ್ತಾರೆ ಅವರೇ ನಮ್ಮ ಅನ್ನದಾತರು. ನಮ್ಮನಾಟಕಗಳುಯಾವುದೇಯುಟೂಬ್‌ನಲ್ಲೂ ಸಿಗುವುದಿಲ್ಲ ಬಂದು ನೋಡಿ ಹರಸಿ ಎಂದರು. ಈ ಸಂದರ್ಭದಲ್ಲಿ ನಾಟಕ ಕಲಾವಿದರಾದ ಮಹಾ ರುದ್ರಾಚಾರ್, ಸಿದ್ದಾರ್ಥ, ಮಹಾಬಲೇಶ್ವರ, ಗುರುಲಿಂಗಯ್ಯ ಹಿರೇಮಠ ಇದ್ದರು.

# ಹಂಪಿಯಲ್ಲಿ ಕರಡಿ ನಡಿಗೆ



ಹಂಪಿ ವಿಜಯವಿಠಲ ದೇವಸ್ಥಾನಕ್ಕೆ ತೆರಳುವ ಕುದರೆ ಮಂಟಪದ ಬಳಿ ರಸ್ತೆಯಲ್ಲಿ ಕರಡಿ ಪ್ರತ್ಯಕ್ಷ. ಹಂಪಿಗೆ ಬರುವ ಪ್ರವಾಸಿಗರಲ್ಲಿ ಹೆಚ್ಚಿದ ಅತಂಕ

## ವಿಜ್ಞಾನ

### ಜೇನುನೊಣವು ಕಚ್ಚಿದ ನಂತರ ಏಕೆ ಸಾಯುತ್ತದೆ?

■ ಆರ್.ಬಿ.ಗುರುಬಸವರಾಜ

ರಾತ್ರಿ ಊಟದ ನಂತರ ವಾಕಿಂಗ್ ಮಾಡಲೆಂದು ಸಿಂದು ಹೊರಗೆ ಬಂದಳು. ಹೊರಗಿನ ಬಲ್ಬ್‌ನ ಸುತ್ತಲೂ ಸಾಕಷ್ಟು ಜೇನು ನೊಣಗಳು ಜಮಾಯಿಸಿದ್ದವು. "ಪಪ್ಪಾ, ಬಾ ಇಲ್ಲಿ. ಎಷ್ಟೊಂದು ಜೇನುನೊಣಗಳು ಬಂದಿವೆ" ಎಂದಳು. ತಂದೆಯ ಜೊತೆಗೆ ತಾಯಿ ಹಾಗೂ ಸಹೋದರಿ ಬಿಂದು ಕೂಡಾ ಬಂದರು. ಎಲ್ಲರೂ ಸೇರಿ ನೋಡುತ್ತಿದ್ದಂತೆ ಒಂದು ಜೇನುನೊಣ ಸಿಂದುನ ಕೈಮೇಲೆ ಕುಳಿತಿತು. ತಕ್ಷಣ ಅವಳು ಕೈಯನ್ನು ಒದರಿದಳು. ತನಗೆ ತೊಂದರೆ ಬಂದಿದೆ ಎಂಬುದನ್ನು ಅರಿತ ಜೇನುನೊಣ ಅವಳ ಕೈಗೆ ಕಚ್ಚಿತು. ಸಿಂದು ಒಮ್ಮೆಲೆ ಜೋರಾಗಿ "ಅಮ್ಮಾ!" ಎಂದು ಅರಚಿದಳು. ಜೇನು ನೊಣ ಹಾರಿಹೋಗಿತ್ತು. ಆದರೆ ಅದು ಕಚ್ಚಿದ ಜಾಗದಲ್ಲಿ ಅದರ ಹಲ್ಲು ಉಳಿದಿತ್ತು. ತಂದೆ ನಿಧಾನವಾಗಿ ಚಿಮ್ಮಟದಿಂದ ಅದನ್ನು ತೆಗೆದರು. ನಂತರ "ಪಾಪ, ಇನ್ನು ಆ ಜೇನುನೊಣ ಬಹಳ ದಿನ ಬದುಕುವುದಿಲ್ಲ" ಎಂದರು. 'ಯಾಕಪ್ಪಾ?' ಎಂದಳು ಬಿಂದು. "ಜೇನು ಕಡಿದ ನಂತರ ಅದು ಹಲ್ಲು ಕಳೆದುಕೊಂಡು ಸಾಯುತ್ತದೆ" ಎಂದು ಹೇಳಿದ ತಂದೆ ಅದರ ಬಗ್ಗೆ ವಿವರಿಸತೊಡಗಿದರು.



ಜೇನುನೊಣಗಳು ಕಚ್ಚಲು ಮುಳ್ಳುತಂತುವನ್ನು ಹೊಂದಿರುವ ಏಕೈಕ ಕೀಟ ಜಾತಿಯಾಗಿದೆ. ಮುಳ್ಳು ತಂತುವು ಜೇನು ನೊಣಕ್ಕೆ ಹಲ್ಲು ಇದ್ದಂತೆ. ಜೇನುನೊಣವು ತನ್ನ ವೈರಿಯಿಂದ ಸಂರಕ್ಷಿಸಿಕೊಳ್ಳಲು ಈ ಮುಳ್ಳನ್ನು ಬಳಸುತ್ತದೆ. ವೈರಿಯ ಚರ್ಮದೊಳಕ್ಕೆ ತನ್ನ ಮುಳ್ಳುಭರಿತ ಹಲ್ಲನ್ನು ಚುಚ್ಚುವ ಮೂಲಕ ಅದರ ಚರ್ಮ ಪ್ರವೇಶಿಸುತ್ತದೆ ಜೇನುನೊಣವು ವ್ಯಕ್ತಿಯನ್ನು ಅಥವಾ ಪ್ರಾಣಿಯನ್ನು ಕಚ್ಚಿದಾಗ, ಮುಳ್ಳುಗಳು ಚರ್ಮದಲ್ಲಿ ಸಿಲುಕಿಕೊಳ್ಳುತ್ತವೆ. ಇದರಿಂದಾಗಿ ಜೇನುನೊಣದ ಹಲ್ಲು ದೇಹದಿಂದ ಕಿತ್ತುಹೋಗುತ್ತದೆ.

ಜೇನುನೊಣವು ವ್ಯಕ್ತಿಯನ್ನು ಅಥವಾ ಪ್ರಾಣಿಯನ್ನು ಕಚ್ಚಿದಾಗ, ಮುಳ್ಳುತಂತುವು ಚರ್ಮದಲ್ಲಿ ಉಳಿಯುತ್ತದೆ ಮತ್ತು ಜೇನುನೊಣವು ಹಾರಿಹೋಗಲು ಪ್ರಯತ್ನಿಸಿದಾಗ, ಅದರ ವಿಷದ ಚೀಲ ಮತ್ತು ಕೆಲವು ಸ್ನಾಯು ಅಂಗಾಂಶಗಳೊಂದಿಗೆ ಜೇನುನೊಣದ ದೇಹದಿಂದ ಹೊರತೆಗೆಯಲಾಗುತ್ತದೆ. ಇದರಿಂದ ಜೇನುನೊಣ ಸಾಯುತ್ತದೆ.

ಜೇನುನೊಣದ ಕುಟುಕು ಮುಳ್ಳು ಅದರ ಜೀರ್ಣಾಂಗ ವ್ಯವಸ್ಥೆಗೆ ಅಂಟಿಕೊಂಡಿರುತ್ತದೆ. ಜೇನುನೊಣದಿಂದ ಕುಟುಕು ಮುಳ್ಳು ಬೇರ್ಪಟ್ಟಾಗ, ಅದು ಜೇನುನೊಣಕ್ಕೆ ದೊಡ್ಡ ಪ್ರಮಾಣದ ಹಾನಿಯನ್ನುಂಟುಮಾಡುತ್ತದೆ. ಹಲ್ಲು ಮುರಿದ ನಂತರ ಅದು ಆಹಾರವನ್ನು ತಿನ್ನಲು ಅಥವಾ ಜೀರ್ಣಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಜೇನುನೊಣಗಳು ಕುಟುಕಿದ ನಂತರ ಸಾಯುವ ಏಕೈಕ ಜೀವಿಗಳಾಗಿವೆ. ಪರಭಕ್ಷಕಗಳಿಂದ ರಕ್ಷಿಸಿಕೊಳ್ಳಲು ಮತ್ತು ತಮ್ಮ ಆವಾಸಸ್ಥಾನವನ್ನು ಉಳಿಸಿಕೊಳ್ಳಲು ಜೇನುನೊಣಗಳು ಇತರೆ ಪ್ರಾಣಿಗಳ ಮೇಲೆ ದಾಳಿ ಮಾಡಿದಾಗ ತಮ್ಮ ಕುಟುಕು ಹಲ್ಲುಗಳನ್ನು ಕಳೆದುಕೊಳ್ಳುತ್ತವೆ. ಪರಭಕ್ಷಕಗಳ ವಿರುದ್ಧ ತಮ್ಮ ಜೇನುಗೂಡುಗಳನ್ನು ರಕ್ಷಿಸಲು ಕುಟುಕು ಹಲ್ಲುಗಳು ವಿಕಸನಗೊಂಡಿವೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಆಫ್ರಿಕಾದಿಂದ ಬಂತೇನು ಈ ಸಿದ್ದಿವೇಷ?



ಕರ್ನಾಟಕದ ಮೊಹರಂ ಆಚರಣೆಗಳಲ್ಲಿ ಹುಲಿ ಕರಡಿ ಕೋಡಂಗಿ ಹಿಡಿಂಬೆ ಪಾಳೇಗಾರ ಫಕೀರ ಕೊರವಂಜಿ ಬಸುರಿ ಬಾಣಂತಿ ಇತ್ಯಾದಿ ವೇಷಗಳು ಸೋಗು ಅಥವಾ ವೇಷಗಳ ಪ್ರದರ್ಶನ ಜರುಗುತ್ತದೆ. ಇವುಗಳಲ್ಲೆಲ್ಲ ವಿಶೇಷವಾದುದು ಸಿದ್ದಿವೇಷ. ಉತ್ತರ ಕರ್ನಾಟಕದ ಬಹುತೇಕ ಕಡೆ ಕಾಣಬರುವ ಈ ವೇಷಕ್ಕೆ ಒಂದೊಂದು ಕಡೆ ಒಂದೊಂದು ಹೆಸರಿದೆ. ಗೋಕಾಕದ ಕಡೆ ಸಿದ್ದಿಕಶಾನಿ, ಬೀಳಗಿಯಲ್ಲಿ ಸಿದ್ದಿಕ ಬಕರಾ, ಅಥಣಿಯಲ್ಲಿ ಸಿದ್ದಿಕಬಾಬಾ, ಬಿಜಾಪುರದಲ್ಲಿ ಅಚೊಳ್ಳಿ ಬಿಚೊಳ್ಳಿ, ಬಳ್ಳಾರಿ ಭಾಗದಲ್ಲಿ ಅಚ್ಚಳ್ಳಿ ಪಿಚ್ಚಳಿ, ರಾಮದುರ್ಗ ಭಾಗದಲ್ಲಿ ಕಳ್ಳಿಬಾಬಾ–ಇತ್ಯಾದಿ.

ಈ ವೇಷದ ಲಕ್ಷಣಗಳಿವು: ಮೈ ಮತ್ತು ಮುಖಕ್ಕೆ ಕಪ್ಪುಬಣ್ಣ; ತಲೆಯ ಮೇಲೆ ಬಣ್ಣದ ಕಾಗದದ ಚೂಪನೆಯ ಟೊಪ್ಪಿಗೆ; ಸೊಂಟಕ್ಕೆ ಸುತ್ತಿದ ಗೋಣಿತಾಟು ಇಲ್ಲವೇ ಕರಿಕಂಬಳಿ; ಅದರ ಮೇಲೆ ಬಿಗಿದ ಗಂಟೆಸರ; ದಟ್ಟ ಗಡ್ಡಮೀಸೆ; ಕೈಯಲ್ಲಿ ದೊಣ್ಣೆ. ಈ ವೇಷವನ್ನು ಹರಕೆಯ ಭಾಗವಾಗಿಯೂ ರಂಜನೆಯ ಭಾಗವಾಗಿಯೂ ಹಾಕಲಾಗುವುದು. ವ್ಯತ್ಯಾಸವೆಂದರೆ, ಹರಕೆಗಾಗಿ ವೇಷ ಧರಿಸಿ ಮೌನಧಾರಣೆ ಮಾಡಿ ಶ್ರದ್ಧೆಯಿಂದ ಮನೆಮನೆಗೆ ಹೋಗಿ ಭಿಕ್ಷೆ ಬೇಡುವರು; ಹಗ್ಗದಂತೆ ಹೊಸೆದ ಟವೆಲ್ಲಿನಿಂದ ಜನರ ಬೆನ್ನಮೇಲೆ ಬಾರಿಸಿ ಹಣ ಕೇಳುವರು; ದೇವರ ಸವಾರಿ ಹೊರಟಾಗ ಅದರ ಮುಂದೆ ಇರುವರು. ಮನರಂಜನೆಗಾಗಿ ವೇಷ ಹಾಕಿದವರು ಚಂಚಲವಾಗಿ ಹರಿದಾಡುತ್ತಾ, ವಾದ್ಯಕಾರನ ಜತೆಗೂಡಿ ಗಲಭೆ ಎಬ್ಬಿಸುತ್ತ ಗಲ್ಲಿಗಲ್ಲಿ ತಿರುಗುವರು. ಬೂದಿ ಬಡಿದುಕೊಂಡು, ಕಪ್ಪು ಕನ್ನಡಕ ಹಾಕಿ ಧರಿಸಿದ ಇವರನ್ನು ಬೀದಿಮಕ್ಕಳು ಛೇಡಿಸುತ್ತಾ 'ಅಚಳ್ಳಿ ಪಿಚಳ್ಳಿ ಬೇವಿನಮರದಾಗ ಬೆಳ್ಳುಳ್ಳಿ' ಎಂದು ಅಣಕಿಸುವರು. ವೇಷಗಾರರು ಅವರ ಮೇಲೆ ಏರಿ ಹೋಗಿ ಹೊಡೆವಂತೆ ನಟಿಸುವರು.

ಈ ಸಿದ್ದಿವೇಷವು ಕುಂದಾಪುರ ಸೀಮೆಯ ಮೊಹರಂನಲ್ಲೂ ಕಾಣಬರುತ್ತದೆ. ಅಲ್ಲಿ ಇದನ್ನು 'ಸಿದ್ದಿಬಾಯ್ ಸಿದ್ದಿ' ಎಂದು ಕರೆಯುವರು. ಲೇಖಕಿ ವೈದೇಹಿಯವರು ಇದನ್ನು "ಕಂಬಳಿ ಸುತ್ತಿಕೊಂಡು, ತಲೆ ಕೆದರಿಕೊಂಡು, ಸೊಂಟಕ್ಕೆ ಒಂದು ಮರದ ಗಂಟೆ ಕಟ್ಟಿಕೊಂಡು, ಕೊಟಕೊಟ ಸದ್ದುಮಾಡುತ್ತ ನಿಂತಲ್ಲಿಂದ ನೆಗೆದು ಹಾರಿ, ಒಮ್ಮೆ ಸಿದ್ದಿಬಾಯ್ ಸಿದ್ದಿ ಎಂದು ಕರ್ಕಶವಾಗಿ ಕೂಗು ಹಾಕುತ್ತಾರೆ" ಎಂದು ಬಣ್ಣಿಸಿರುವರು. ಈ ಲಕ್ಷಣಗಳು ಉತ್ತರ ಕರ್ನಾಟಕದ ಸಿದ್ದಿವೇಷವನ್ನೇ ನೆನಪಿಸುತ್ತವೆ. ಹಾಗೆಂದು ಸಿದ್ದಿವೇಷವು ಬಿಜಾಪುರ ಸೀಮೆಯಿಂದ ಕರಾವಳಿಗೆ ಹೋದದ್ದಲ್ಲ. ಬಹುಶಃ ಸಿದ್ದಿ ಜನರು ನೆಲೆಸಿದ ಕಡೆಯಲ್ಲೆಲ್ಲ ಅದು ಇದ್ದಂತಿದೆ. ಫರಕೆಂದರೆ, ಕುಂದಾಪುರದಲ್ಲಿ ಸಿದ್ಧಿವೇಷವನ್ನು ಆಫ್ರಿಕನ್ ಮೂಲದ ಕಪ್ಪುಜನರೇ ಬಂದು ಹಾಕುತ್ತಿದ್ದರು; ಉತ್ತರ ಕರ್ನಾಟಕದಲ್ಲಿ ಇದನ್ನು ಸ್ಥಳೀಯರು ಹಾಕುತ್ತಿದ್ದಾರೆ.

ತುಮಕೂರು ಸೀಮೆಯ ಮೊಹರಂ ಆಚರಣೆಗಳಲ್ಲಿ ಕೋಡಂಗಿ ವೇಷವಿದ್ದು, ಅದೂ ಸಿದ್ದಿವೇಷಕ್ಕೆ ಹತ್ತಿರವಿದೆ. ಸಣ್ಣ ವ್ಯತ್ಯಾಸವೆಂದರೆ, ಕೋಡಂಗಿಯ ಕೈಯಲ್ಲಿ ಅಡಕೆಹಾಳೆ ಸುತ್ತಿ ಮಾಡಿದ, ದೊಡ್ಡಸದ್ದು ಎಬ್ಬಿಸುತ್ತ ಹುಸಿಪೆಟ್ಟು ಕೊಡುವ ಕೋಲಿದ್ದು, ಮುಖಕ್ಕೆ ಕಪ್ಪುಬಣ್ಣದ ಬದಲು ಕಪ್ಪು ಬಳಿದ ಕೆನ್ನಾಲಗೆ ಚಾಚಿದ ಮುಖವಾಡವಿದೆ. ಈ ಕೋಡಂಗಿಯು ಮೊಹರಂ ದಿನಗಳಲ್ಲಿ ಆಸುಪಾಸಿನ ಹಳ್ಳಿಗಳ ಮೇಲೆ ಹೋಗಿ ಹಬ್ಬದ ಖರ್ಚನ್ನು ಗಿಟ್ಟಿಸುವುದು. ತಮಟೆ ಹೊಡೆತಕ್ಕೆ ಹೆಜ್ಜೆಹಾಕುವ ಕೋಡಂಗಿಯ ಹಿಂದೆಯೂ ಮಕ್ಕಳ ಹಿಂಡು ಇರುತ್ತದೆ. ಮಕ್ಕಳು ಕೋಡಂಗಿಯ ಸೊಂಟಕ್ಕೆ ಕಟ್ಟಿದ ಗಂಟೆಯನ್ನು ಅಲುಗಿಸಿ ಅಥವಾ ಅದು ಉಟ್ಟಗೋಣಿಯನ್ನು ಎಳೆದು ಓಡಿಹೋಗುತ್ತವೆ; ಕೋಡಂಗಿ ಇದಕ್ಕೇ ಕಾಯುತ್ತಿದ್ದಂತೆ, ಕುಣಿತ ಬಿಟ್ಟು ಮಕ್ಕಳನ್ನು ಅಟ್ಟಿಸಿಕೊಂಡು ಓಡಿ ಹೋಗುತ್ತದೆ. ದಂಡಿನಶಿವರದ ಪ್ರಸಿದ್ಧ ಕೋಡಂಗಿ ಪಾತ್ರಧಾರಿ ಲಕ್ಷ್ಮಣಯ್ಯನವರಲ್ಲಿ ಈ ವೇಷ ಹೇಗೆ ಬಂತು ಎಂದು ವಿಚಾರಿಸಿದೆ. ಅದಕ್ಕವರು "ನಮ್ಮ ಹಿರೇರು ಹಾಕ್ತಿದ್ರು ಅಂತ ನಾವೂ ಹಾಕ್ತಿದ್ದೀವಿ ಸೋಮಿ. ಮಕ್ಕಳು ಇಲ್ದಿದ್ದರೆ ಈ ಆಟವೇ ಇಲ್ಲ. ಮಕ್ಕಳನ್ನ ಓಡಿಸೋದೇ ನಮಗೆ ಪ್ರೀತಿ. ಮಕ್ಕಳಿಗೆ ಹೆದರ್ಕೊಂಡು ಓಡೋದೇ ಪ್ರೀತಿ. ತಾಯಂದಿರು ಮಕ್ಕಳ ತಲೆಮೇಲೆ ನಮ್ಮ ಕೈಲಿ ಮೂರು ಏಟು ಹಾಕಿಸ್ತಾರೆ ಹೆದರಿಕೆ ಬಿಡಲಿ ಅಂತ. ಆದರೆ ಕೋಡಂಗಿಗೆ ಹೆದರಿ ಅವು ಉಚ್ಚೆ ಹುಯ್ಕೊಂಡಿರೋದೇ ಜಾಸ್ತಿ' ಎಂದರು.



ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Hampi Times E-paper
SCAN AND READ

ಈ ವೇಷಗಳ ನಿಜವಾದ ಮೂಲ ಯಾವುದು? ಈ ವೇಷಗಾರರು ಯಾಕೆ ಮುಖಕ್ಕೆ ಕಪ್ಪು ಬಳಿದುಕೊಂಡು ಕಾಳಾಮುಖಿ ಆಗುತ್ತಾರೆ? ಅಚ್ಚಳ್ಳಿ ಪಿಚ್ಚಳಿ, ಕಳ್ಳೊಳ್ಳಿ, ಅಳ್ಳೊಳ್ಳಿ, ಸಿದ್ಧಿಕಸಿದ್ಧಿ, ಸಿದ್ದಿಕಬಾವಾ ಮುಂತಾದ ಹೆಸರುಗಳ ಹಿಂದಿನ ಅರ್ಥವೇನು? ಸಿದ್ದಿಕಸಿದ್ದಿ ವೇಷಹಾಕುವುದಕ್ಕೆ ಖ್ಯಾತರಾಗಿದ್ದ ಕರ್ನಾಟಕದ ಜಾತಿಗಾರ ಸಮುದಾಯಕ್ಕೂ ಇದಕ್ಕೂ ಏನು ಸಂಬಂಧ? ಈ ವೇಷ ಯಾಕೆ ಮೊಹರಂ ಹಬ್ಬದಲ್ಲೇ ಕಾಣಿಸುತ್ತದೆ? ಹರಕೆ ವೇಷಧಾರಿಗಳೇಕೆ ಮಾತಾಡುವುದಿಲ್ಲ? ಮಕ್ಕಳೇಕೆ ಇವರನ್ನು ಛೇಡಿಸುತ್ತಾರೆ? ಈ ಪ್ರಶ್ನೆಗಳಿಗೆ ಸಮರ್ಪಕ ಜವಾಬು ಸಿಗುತ್ತಿಲ್ಲ. ಆದರೆ 'ಸಿದ್ದಿ' ಎಂಬ ಪದ ಮತ್ತು ಮುಖಕ್ಕೆ ಬಳಿದುಕೊಳ್ಳುವ ಕಪ್ಪುಬಣ್ಣಗಳು, ಈ ಸೋಗು ಆಫ್ರಿಕಾ ಮೂಲದಿಂದ ಕರ್ನಾಟಕಕ್ಕೆ ಬಂದಿರುವ ನೃತ್ಯವೆಂಬ ಸೂಚನೆಯನ್ನಂತೂ ನೀಡುತ್ತವೆ. ಈ ಸೂಚನೆಯ ಬೆನ್ನುಹತ್ತಿ ಹೋದರೆ ಕೆಲವು ಸ್ವಾರಸ್ಯಕರ ಹೊಳಹುಗಳು ಸಿಗುತ್ತವೆ.

ಅರಬ್ಬಿ ಸಮುದ್ರಕ್ಕೆ ಮೈಯನ್ನು ತೆರೆದುಕೊಂಡಿರುವ, ಪೂರ್ವ ಆಫ್ರಿಕದ ದೇಶಗಳಾದ ಸುಡಾನ್ ಇಥಿಯೋಪಿಯಾಗಳಿಂದ ಗಟ್ಟಿಮುಟ್ಟಾದ ಜನರನ್ನು ಹಿಡಿದು ಹಡಗುಗಳಲ್ಲಿ ತುಂಬಿಕೊಂಡು ಹೋಗಿ ಬೇರೆಬೇರೆ ದೇಶದ ಮಾರುಕಟ್ಟೆಗಳಲ್ಲಿ ಮಾರುವ ಕೆಲಸವನ್ನು ಅರಬ್ ಮತ್ತು ಯೂರೋಪಿನ ವರ್ತಕರು ಮಾಡುತ್ತಿದ್ದರು. ಗುಲಾಮರಿಗೆ ಅರಬ್ಬಿ ಭಾಷೆಯಲ್ಲಿ ಹಬಶಿ ಅಥವಾ ಸಿದ್ದಿ ಎನ್ನಲಾಗುತ್ತದೆ. 'ಹಬಶಿ' ಎಂದರೆ ಅಬಿಸೀನಿಯಾ (ಈಗಿನ ಇಥಿಯೋಪಿಯಾ) ದೇಶದವರು ಎಂದರ್ಥ. 'ಸಿದ್ದಿ' ಶಬ್ದ ಆಫ್ರಿಕಾದ ಶಿದಿಮಾಸ್ ಎಂಬ ಆಫ್ರಿಕನ್ ಜನಾಂಗದಿಂದ ಬಂದಿದೆ. ಈಗಲೂ ಯಲ್ಲಾಪುರ ಸೀಮೆಯಲ್ಲಿರುವ ಆಫ್ರಿಕಾ ಮೂಲದ ಜನರನ್ನು ಸಿದ್ಧಿಗಳೆಂದೇ ಕರೆಯಲಾಗುತ್ತಿದೆ.

ಮುಂದೆ ಯೂರೋಪಿನ ದೇಶಗಳು ಆಫ್ರಿಕಾ ಖಂಡವನ್ನು ಆಕ್ರಮಿಸಿಕೊಂಡು ಹರಿದು ಹಂಚಿಕೊಂಡವು. ಪೋರ್ಚುಗೀಸರು ತಮ್ಮ ಆಫ್ರಿಕನ್ ವಸಾಹತುಗಳಿಂದ ಜನರನ್ನು ಹಿಡಿದು, ಗುಲಾಮರ ಮಾರಾಟವನ್ನು ಅರಬರ ಜತೆಗೂಡಿ ಮುಂದುವರೆಸಿದರು. ಗೋವೆಯನ್ನು ಹಿಡಿದ ಬಳಿಕ ಪೋರ್ಚುಗೀಜರಿಗೆ ಗುಲಾಮರ ಮಾರಾಟಕ್ಕೆ ದೊಡ್ಡ ಮಾರುಕಟ್ಟೆ ನಿರ್ಮಾಣವಾಯಿತು. ಈ ಧಂದೆಯ ಭಾಗವಾಗಿ ಆಫ್ರಿಕನರು ತಮ್ಮಿಚ್ಛೆಗೆ ವಿರುದ್ಧವಾಗಿ ಜಗತ್ತಿನ ಬೇರೆಬೇರೆ ಭಾಗಗಳಿಗೆ ಸಾಗಿಸಲ್ಪಟ್ಟರು. ಈ ಸಾಗಾಟದ ಭಾಗವಾಗಿಯೇ ಅವರು ಭಾರತದ ಪಶ್ಚಿಮ ಕರಾವಳಿಯಲ್ಲಿದ್ದ ರಾಜ್ಯಗಳಿಗೂ ತರಲ್ಪಟ್ಟರು. ಈಗಲೂ ಕರಾಚಿಯಿಂದ ಹಿಡಿದು ಗುಜರಾತ್–ಮಹಾರಾಷ್ಟ್ರಗಳ ಕಡಲ ಬದಿಯ ಊರುಗಳಿಂದ ಹಿಡಿದು, ಉತ್ತರ ಕನ್ನಡದ ಹೊನ್ನಾವರ–ಭಟ್ಕಳಗಳ ತನಕ ಪಡುವಣ ಕಡಲ ತೀರದ ಉದ್ದಕ್ಕೂ ಆಫ್ರಿಕಾ ಮೂಲದ ಜನ ಕಾಣಸಿಗುತ್ತಾರೆ.

ಮುಂದೆ ದೆಹಲಿ, ಅಹಮದ್‌ನಗರ ಹಾಗೂ ಬಿಜಾಪುರ ರಾಜ್ಯಗಳ ಸುಲ್ತಾನರ ಕಾಲದಲ್ಲಿ, ಬೇರೆಬೇರೆ ಸೇವೆಗಳಿಗೆಂದು ಆಫ್ರಿಕನ್ ದೇಶಗಳಿಂದ ಗುಲಾಮರು ತರಲ್ಪಟ್ಟರು. ಅಹಮದ್‌ನಗರ ಬಿಜಾಪುರಗಳು ಗುಲಾಮರ ಮಾರಾಟದ ಪ್ರಸಿದ್ಧ ಮಾರುಕಟ್ಟೆಗಳೂ ಆಗಿದ್ದವು. ಇದರ ಜತೆಗೆ ಆಫ್ರಿಕಾ ದೇಶಗಳಿಂದ ರಾಯಭಾರಿಗಳಾಗಿಯೊ ವ್ಯಾಪಾರಿಗಳಾಗಿಯೊ ಬಂದ ಆಫ್ರಿಕನರಲ್ಲಿ ಕೆಲವರು ಇಲ್ಲಿಯೇ ಉಳಿದುಕೊಂಡರು. ಕಾಲಾನಂತರ, ರಾಜಪ್ರಭುತ್ವದ ಬೇರೆಬೇರೆ ಸ್ತರಗಳಲ್ಲಿ ಸೇವೆಗೆ ಸೇರಿದ ಸಿದ್ದಿಗಳಲ್ಲಿ ಕೆಲವು ಆಫ್ರಿಕನರು ಗುಲಾಮಗಿರಿಯಿಂದ ಬಿಡುಗಡೆ ಪಡೆದು ಸ್ವತಂತ್ರ ಜೀವನ ಆರಂಭಿಸಿದರು; ಕೆಲವರು ಗುಲಾಮಗಿರಿಯಿಂದ ತಪ್ಪಿಸಿಕೊಂಡು ಹೋಗಿ ನೆಲೆಸಿದರು; ಇನ್ನೂ ಕೆಲವರು ತಮ್ಮ ಕೆಚ್ಚು ಜಾಣತನ ನಿಷ್ಠೆಗಳ ಮೂಲಕ ದೊಡ್ಡದೊಡ್ಡ ಅಧಿಕಾರ ಸ್ಥಾನಕ್ಕೇರಿದರು. ಅಂತಹವರಲ್ಲಿ ವಿಜಾಪುರದ ಸಿದ್ದಿ ಜವಾಹರ್, ಸಿದ್ದಿ ಅಂಬರ್, ಸಿದ್ದಿ ಮಸೂದ್‌ಖಾನ್, ಸಿದ್ದಿ ರೇಹಾನ್, ಸಿದ್ದಿ ಇಖಲಾಸ್‌ಖಾನ್, ಸಿದ್ದಿ ಮಲಿಕ್‌ಅಂಬರ್ ಮುಖ್ಯರು. ಆದಿಲಶಾಹಿ ಕಾಲದ ಕಲಾವಿದರು ಈ ಪ್ರಸಿದ್ಧ ಸಿದ್ದಿಗಳ ವರ್ಣಚಿತ್ರಗಳನ್ನು ಬಿಡಿಸಿಟ್ಟಿದ್ದಾರೆ. ಬಿಜಾಪುರದಲ್ಲಿ ಮಹಮ್ಮದ್ ಆದಿಲಶಾಹನ ಬಾಲ್ಯ ಸ್ನೇಹಿತನಾಗಿದ್ದ ಸಿದ್ದಿ ರೇಹಾನನು ಶೂರತನಕ್ಕೆ ಹೆಸರಾಗಿದ್ದನು. ಮಹಮದ್ ಆದಿಲಶಾಹನಿಗೆ ಇಖಲಾಸ್‌ಖಾನ್ ಸಿದ್ದಿಯು ಪ್ರಧಾನ ಮಂತ್ರಿಯಾಗಿದ್ದನು. ಇಖಲಾಸ ಖಾನನು ಸುಲ್ತಾನನ ಜತೆ ಆನೆಸವಾರಿ ಮಾಡುವ ವರ್ಣಚಿತ್ರಗಳಿವೆ. ಅವನು ಕಟ್ಟಿಸಿದ ಮಸೀದಿಯೊಂದು ಈಗಲೂ ಬಿಜಾಪುರದಲ್ಲಿದೆ. ಇಖಲಾಸನ ಸೋದರರಾದ ಹಮೀದಖಾನ್ ಹಾಗೂ ದಿಲಾವರ್‌ಖಾನರು ಕೂಡ ಆದಿಲಶಾಹಿ ಸೇನೆಯಲ್ಲಿ ಪ್ರತಿಷ್ಠಿತ ಸರದಾರರಾಗಿದ್ದರು. ಅಹಮದಾಬಾದಿನ ಅಹಮದಶಾಹ ಸುಲ್ತಾನನ ಗುಲಾಮನಾದ ಸಿದ್ದಿ ಸೈಯದನು ಸುಂದರ ಮಸೀದಿಗಳಲ್ಲಿ ಒಂದನ್ನು ಕಟ್ಟಿಸಿದನು. ನಾನು ಅಹಮದಾಬಾದಿಗೆ ಹೋಗಿದ್ದಾಗ, ಸುಂದರವಾದ ಜಾಲಂದ್ರಗಳನ್ನು ನೋಡಲೆಂದೇ ಆ ಮಸೀದಿಗೆ ಭೇಟಿ ನೀಡಿದೆ. ಈಯೆಲ್ಲ ವಿವರಗಳು ಸಿದ್ದಿಗಳು ಅಧಿಕಾರ ಮತ್ತು ಪ್ರತಿಷ್ಠೆ ಪಡೆದ ಪರಿಯನ್ನು ಸೂಚಿಸುತ್ತವೆ. ದೆಹಲಿಯಲ್ಲಿ ರಾಜಕುವರಿ ರಜಿಯಾ ಸುಲ್ತಾನಳು, ಯಾಖೂತ್ ಸಿದ್ದಿಯನ್ನು ಮೋಹಿಸಿ, ಅವನಿಗೆ ಕುದುರೆಲಾಯದ ಉಸ್ತುವಾರಿದಾರನಾಗಿ ಬಡ್ತಿಯನ್ನು ನೀಡಿದಳು. ಈ ಪ್ರಕರಣ, ಮಧ್ಯಕಾಲದ ಚರಿತ್ರೆಯಲ್ಲಿ ಬಹಳ ವರ್ಣರಂಜಿತವಾಗಿದೆ. ಇವರ ಪ್ರೇಮವನ್ನು ವಸ್ತುವನ್ನಾಗಿ ಮಾಡಿಕೊಂಡು ಹಿಂದಿಯಲ್ಲಿ ಸಿನಿಮಾ ಕೂಡ ಬಂದಿದೆ.



ವಿಜಾಪುರ ಸಿದ್ದಿಗಳಲ್ಲೆಲ್ಲ ದೊಡ್ಡ ಹೆಸರು ಪಡೆದವನು ಮಲಿಕ್ ಅಂಬರ್. ಅಂಬರನ ಜೀವನವು ನಾಟಕೀಯವಾದ ಘಟನೆಗಳಿಂದಲೂ ಅನೂಹ್ಯವಾದ ತಿರುವುಗಳಿಂದಲೂ ಅಗಾಧವಾದ ಸಾಹಸಗಳಿಂದಲೂ ಕೂಡಿದೆ. ಇಥಿಯೋಪಿಯಾದಲ್ಲಿ ಹುಟ್ಟಿದ ಅಂಬರ್, ಮಗುವಿದ್ದಾಗಲೇ ತಂದೆಯಿಂದ ಗುಲಾಮ ವ್ಯಾಪಾರಿಗಳಿಗೆ ಮಾರಲ್ಪಟ್ಟನು. ವ್ಯಾಪಾರಿಗಳ ಕೈಯಿಂದ ಕೈಗೆ ಬದಲಾಗುತ್ತ ಕಡೆಗೆ ಅಹಮದ್‌ನಗರ ಸೇರಿದನು. ಸ್ವತಂತ್ರಗೊಂಡ ಬಳಿಕ ಬಿಜಾಪುರಕ್ಕೆ ಬಂದು ಆದಿಲಶಾಹಿ ಸೇನೆಯ ತುಕಡಿಗೆ ದಂಡನಾಯಕನಾದನು. ಆದಿಲಶಾಹಿಗಳ ಚರಿತ್ರೆಯಲ್ಲಿ ಧೀಮಂತ ಮಹಿಳೆಯಾದ ಚಾಂದಬೀಬಿಯ ಆಪ್ತಬಂಟನಾದನು. ಸುಲ್ತಾನನೊಡನೆ ಭಿನ್ನಮತ ಹುಟ್ಟಿ, ಬಿಜಾಪುರ ಬಿಟ್ಟು ತನ್ನದೇ ಆದ ಸೈನ್ಯ ಕಟ್ಟಿದನು. ಅವನ ಸಹಾಯ ಪಡೆಯುವುದಕ್ಕೆ ದಖನ್ನಿನ ಸುಲ್ತಾನರು ಹಾತೊರೆಯುತ್ತಿದ್ದರು. ಅಹಮದ್‌ನಗರಕ್ಕೆ ಮರಳಿ ಹೋದ ಅಂಬರನು 60 ಸಾವಿರ ಅಶ್ವದಳಕ್ಕೆ ಸರದಾರನಾದನು. ಅಂಬರನು ಮೊಗಲರು ದಖನ್ನಿಗೆ ಹೆಜ್ಜೆಯಿಡದಂತೆ ತನ್ನ ಜೀವಿತದ ಕೊನೆಯ ತನಕ ತಡೆದನು. ಚರಿತ್ರಕಾರ ಫೆರಿಸ್ತಾ ತನ್ನ 'ತಾರೀಖೆ ಫೆರಿಸ್ತಾ'ದಲ್ಲಿ ಅಂಬರಖಾನನ ಸಾಹಸ ಮತ್ತು ದಕ್ಷತೆಗಳನ್ನು ಕೊಂಡಾಡುತ್ತಾನೆ. ಮೊಗಲ್ ಸಾಮ್ರಾಜ್ಯ ವಿಸ್ತರಣೆಗೆ ಹಾದಿ ಮುಳ್ಳಾಗಿದ್ದ ಅಂಬರನ ವಿಷಯ ಬಂದಾಗಲೆಲ್ಲ ಚಕ್ರವರ್ತಿ ಜಹಾಂಗೀರನು 'ಆ ಕರಿಮುಖದ ಸಿದ್ದಿ' ಎಂದು ರೇಗಾಡುತ್ತಿದ್ದನಂತೆ. ಶಿವಾಜಿಯ ಅಜ್ಜ ಮಲೋಜಿಯು ಅಂಬರನ ಬಲಗೈ ಬಂಟನು. ಗೆರಿಲ್ಲಾ ಯುದ್ಧವನ್ನು ಅಂಬರಖಾನನಿಂದ ಕಲಿತು ಮೊಗಲರ ಮೇಲೆ ಪ್ರಯೋಗಿಸಿದ ಮರಾಠರು, ಅಂಬರನ್ನು ಮಿಲಿಟರಿ ಗುರುವೆಂದು ಭಾವಿಸಿದ್ದರು. ವ್ಯಂಗ್ಯವೆಂದರೆ, ಬಿಜಾಪುರದಲ್ಲಿ ಬೆಳೆದ ಅಂಬರನು, ಅಹಮದ್‌ನಗರದ ವತಿಯಿಂದ ಬಂದು ಎರಡನೇ ಇಬ್ರಾಹಿಮನ ಕನಸಿನ ನಗರವಾದ ಬಿಜಾಪುರದ ನವರಸಪುರವನ್ನು ಹಾಳುಗೆಡವಿದನು. ರಾಜಕೀಯ ಯುದ್ಧಗಳನ್ನು ಧಾರ್ಮಿಕ ಸಮುದಾಯಗಳ ನಡುವಣ ಕದನಗಳೆಂದು ಬಿಂಬಿಸುವವರು, ರಾಜಕಾರಣದೊಳಗಿನ ವೈರುಧ್ಯಗಳನ್ನು ಗಮನಿಸುವುದಿಲ್ಲ.

ಹೀಗೆ ಅರಮನೆ ಸೇವೆ, ವ್ಯಾಪಾರ, ಆಡಳಿತ ಹಾಗೂ ಸೈನ್ಯದ ಭಾಗವಾಗಿ ಹೋದ ಆಫ್ರಿಕನ್ ಸಿದ್ದಿಗಳು, ಮುಂದೆ ಸ್ಥಳೀಯ ಮಹಿಳೆಯರನ್ನು ಲಗ್ನವಾಗುತ್ತ ಹೋದರು. ಅದರಲ್ಲೂ ಪ್ರತಿಷ್ಠಿತ ಸ್ಥಾನಕ್ಕೇರಿದ ಸಿದ್ದಿಗಳು ರಾಜಮನೆತನದ ಜತೆ ಕೌಟುಂಬಿಕ ಸಂಪರ್ಕವನ್ನೂ ಏರ್ಪಡಿಸಿಕೊಂಡರು. ಅಂಬರಖಾನನು ಬಿಜಾಪುರದ ಸುಲ್ತಾನರಿಗೆ ಕಾಡಿಬೇಡಿ ಮಗನಿಗೆ 'ಬಿಳಿಯ' ಮನೆತನದ ಹೆಣ್ಣನ್ನು ತಂದು ಮದುವೆ ಮಾಡಿದನು. ಎತ್ತರ ನಿಲುವಿನ ಗೌರವರ್ಣದ ಅರಬ್ ತುರ್ಕಿ ಆಫಘನ್ ಪರ್ಶಿಯಾ ಮೂಲದ ಜನರ ಜತೆ ಹೋಲಿಸಿದರೆ, ದಖನ್ನಿನ ನಸುಗಪ್ಪು ಬಣ್ಣದ ಸ್ಥಳೀಯ ಜನರ ಜತೆ ಆಫ್ರಿಕಾದ ಸಿದ್ದಿಗಳು ಬೇಗನೆ ಹೆಚ್ಚು ಹೊಂದಿಕೊಂಡರು. ಎರಡು ಶತಮಾನ ಕಾಲ ನಿರಂತರ ನಡೆದ ಜನಾಂಗ ಸಂಕರದ ಕಾರಣ, ಬಿಜಾಪುರ ಸೀಮೆಯಲ್ಲಿ ಆಫ್ರಿಕನ್ ಜನಾಂಗಿಕ ಲಕ್ಷಣವನ್ನು ಯಥಾವತ್ ಉಳಿಸಿಕೊಂಡವರು ಬಹುಶಃ ಉಳಿಯಲಿಲ್ಲ. ಇವರಿಗೆ ಹೋಲಿಸಿದರೆ, ಯಲ್ಲಾಪುರದ ಕಾಡುವಾಸಿ ಸಿದ್ದಿಗಳು, ಹೆಚ್ಚಿನ ಜನಾಂಗ ಸಂಕರವಿಲ್ಲದೆ ಮೂಲ ಚಹರೆ ಉಳಿಸಿಕೊಂಡರು. ಇದಕ್ಕೆ ಕಾರಣ, ಇವರಲ್ಲಿ ಹೆಚ್ಚಿನವರು ಪೋರ್ಚುಗೀಸರ ಹಿಡಿತದಿಂದ ತಪ್ಪಿಸಿಕೊಂಡು ಗೋವೆಯಿಂದ ಪಲಾಯನ ಮಾಡಿ ಬಂದವರಾಗಿದ್ದುದು. ಇವರಲ್ಲಿ ಕೆಲವರಾದರೂ ಆದಿಲಶಾಹಿ ರಾಜ್ಯವನ್ನು ಔರಂಗಜೇಬನು ನಾಶಮಾಡಿದ ಬಳಿಕ ಬಿಜಾಪುರದಿಂದ ಹೋಗಿ ಸೇರಿಕೊಂಡಿರಬೇಕು. ಇದಕ್ಕೆ ಸಾಕ್ಷಿ, ಉತ್ತರ ಕನ್ನಡದ ಸಿದ್ದಿಗಳಲ್ಲಿ ಮುಸ್ಲಿಮರೂ ಇರುವುದು. ಬಿಜಾಪುರ ಸೀಮೆಯಲ್ಲಿ ಆಫ್ರಿಕನ್ ಜನಾಂಗದ ಮೂಲಲಕ್ಷಣಗಳನ್ನು ಉಳಿಸಿಕೊಂಡ ಮುಸ್ಲಿಮರು ಈಗಲೂ ಕೆಲವರು ಇದ್ದಾರೆ.

ಜನಾಂಗ ಲಕ್ಷಣಗಳು ಮಸಳಿಸಿದರೂ, ಸಿದ್ದಿಗಳ ಜತೆ ಬಂದಿದ್ದ ಕುಣಿತವೊಂದು ಕರ್ನಾಟಕದಲ್ಲಿ ಉಳಿದುಕೊಂಡಿತು. ದಖನ್ನಿನ ಸಿದ್ದಿಗಳು ಇಸ್ಲಾಮನ್ನು ಸ್ವೀಕರಿಸಿ ಸ್ಥಳೀಕರಣ ಹೊಂದಿದ ಬಳಿಕ, ಆಫ್ರಿಕಾ ಮೂಲದ ಕೆಲವು ಆಚರಣೆಗಳನ್ನು ತಮ್ಮ ಅಸ್ಮಿತೆಯಾಗಿ ಉಳಿಸಿಕೊಂಡರೆಂದು ಕಾಣುತ್ತದೆ. ಅವರಿಗೆ ಕುಣಿತಕ್ಕೂ ಆಯುಧ ಪ್ರದರ್ಶನಕ್ಕೂ ಹಾಡಿಗೂ ಅವಕಾಶವಿದ್ದ ಮೊಹರಂನ ಆಚರಣೆ ಪ್ರಿಯವಾಗಿರಬಹುದು; ಅಲ್ಲಿ ತಮ್ಮ ಶೌರ್ಯ ಪ್ರದರ್ಶನ, ವೇಷ ಕುಣಿತಗಳನ್ನು ಸೇರಿಸಿರಬಹುದು; ಉತ್ತರ ಕನ್ನಡ ಮತ್ತು ಗುಜರಾತಿನ ಸಿದ್ಧಿಯರಲ್ಲಿ ಈಗಲೂ ಇರುವ ಕುಣಿತಗಳಲ್ಲಿ ಸಿದ್ದಿಸೋಗಿನ ಲಕ್ಷಣಗಳಿವೆ. ಮುಖ್ಯವಾಗಿ ಸೊಂಟದ ಮೇಲಿನ ನಗ್ನತೆ, ಮುಖಕ್ಕೆ ಬಣ್ಣದ ಪಟ್ಟೆ ಬಳಿದುಕೊಳ್ಳುವಿಕೆ ಹಾಗೂ ಕಲ್ಲಹರಳು ತುಂಬಿದ ತೆಂಗಿನಚಿಪ್ಪನ್ನು ಬಟ್ಟೆಯಲ್ಲಿ ಕಟ್ಟಿ ಕೈಯಲ್ಲಿ ಹಿಡಿದಿರುವುದು. ವೇಷಗಾರರು ಸೊಂಟಕ್ಕೆ ಕಟ್ಟಿಕೊಂಡ ಗಂಟೆಯ ಲೊಳ್‌ಲೊಳ್ ಸದ್ದಿನಿಂದ 'ಅಚೊಳ್ಳಿ' 'ಅಳ್ಳೊಳ್ಳಿ' ಪದಗಳು ಬಂದಿರಬಹುದು. ಕೊಪ್ಪಳ ಜಿಲ್ಲೆಯ ಕೆಲವು ಕಡೆ ಸಿದ್ದಿ ವೇಷಧಾರಿಯ ಜತೆ ಹ್ಯಾಟುಕೋಟು ತೊಟ್ಟ ಯೂರೋಪಿಯನ್ ಬಿಳಿಯನ ವೇಷವಿದೆ. ಇದು ಗುಲಾಮರ ಮಾರಾಟ ಮಾಡುತ್ತಿದ್ದ ಪೋರ್ಚುಗೀಸರ ಅಣಕುರೂಪವೂ ಆಗಿರಬಹುದು.

ಈ ಊಹೆಗಳು ನಿಜವೇ ಆಗಿದ್ದರೆ, ಆಫ್ರಿಕಾ ಮೂಲದ ನೃತ್ಯವೊಂದು ಇರಾನ್ ಮತ್ತು ಇರಾಕಿನಿಂದ ಬಂದ ಧಾರ್ಮಿಕ ಆಚರಣೆಯೊಡನೆ ಸೇರಿ, ಕರ್ನಾಟಕದ ಸಾಂಸ್ಕೃತಿಕ ಲೋಕದಲ್ಲಿ ನೆಲೆಸಿದೆ ಎಂದಂತಾಯಿತು. ಕಲೆಯೊಂದರ ಈ ಖಂಡಾಂತರ ಪಯಣ ಮತ್ತು ಸಾಂಸ್ಕೃತಿಕ ರೂಪಾಂತರ ಬೆರಗು ಹುಟ್ಟಿಸುತ್ತದೆ. ವೈರುಧ್ಯದ ಸಂಗತಿಯೆಂದರೆ: 'ನಾಗರಿಕ' 'ಗೌರವರ್ಣದ' 'ಕುಲೀನ' ಎನಿಸಿಕೊಂಡ ಸಮಾಜಗಳು ತಮ್ಮಂತೇ ಇರುವ ನರಮನುಷ್ಯರನ್ನು ಬೇಟೆಯಾಡಿ, ನಾವೆಗಳಲ್ಲಿ ಸಾಗಿಸಿ, ಮಾರುಕಟ್ಟೆಗಳಲ್ಲಿಟ್ಟು ಪಶುವಂತೆ ಮಾರಾಟ ಮಾಡಿದ್ದು; ಅವರ ಬಿಟ್ಟಿ ದುಡಿಮೆ ಪಡೆದು ಮನುಕುಲದ ಚರಿತ್ರೆಯಲ್ಲೇ ಕರಾಳ ಎನ್ನಬಹುದಾದ ಕೃತ್ಯವೆಸಗಿದ್ದು. ಇದಕ್ಕೆ ಪ್ರತಿಯಾಗಿ 'ಅನಾಗರಿಕ' 'ಕಪ್ಪು' 'ಗುಲಾಮ' ಎನಿಸಿಕೊಂಡ ಆಫ್ರಿಕನರು, ತಮ್ಮನ್ನು ಅಮಾನುಷವಾಗಿ ನಡೆಸಿಕೊಂಡ ಸಮಾಜಗಳಿಗೆ ತಮ್ಮ ದುಡಿಮೆಯ ಜತೆಗೆ ಹಾಡು ನೃತ್ಯಗಳನ್ನೂ ಉಡುಗೊರೆಯಾಗಿ ಕೊಟ್ಟವು.

ಕರ್ನಾಟಕದ ಚರಿತ್ರೆ ಕಲೆ ಸಂಗೀತ ಮತ್ತು ಧಾರ್ಮಿಕ ಆಚರಣೆಗಳಲ್ಲಿ ಆಫ್ರಿಕಾ ಮೂಲದ ಇನ್ನೂ ಯಾವ್ಯಾವ ಪಳೆಯುಳಿಕೆಗಳು ಇವೆಯೊ, ಶೋಧ ನಡೆಯಬೇಕಿದೆ. ಉತ್ತರ ಕನ್ನಡದ ಸಿದ್ಧಿಗಳನ್ನು ಕುರಿತು ಜನಪದ ವಿದ್ವಾಂಸರು ಸಾಕಷ್ಟು ಅಧ್ಯಯನ ಮಾಡಿದ್ದಾರೆ. ಆದರೆ ಬಿಜಾಪುರದ ಸಿದ್ಧಿ ಮತ್ತು ಹಬಶಿಗಳನ್ನು ಕುರಿತು ಹೆಚ್ಚಿನ ಅಧ್ಯಯನ ಕನ್ನಡದಲ್ಲಿ ಪ್ರಕಟವಾದಂತಿಲ್ಲ. ಇಂತಹ ಹುಡುಕಾಟಗಳಿಗೆ ಕರ್ನಾಟಕದ ಮೊಹರಂ ಸಿದ್ದಿಸೋಗು ಕೆಣಕುತ್ತಿದೆ.

# ಹಂಪೆಯ ಬಾಲಕೃಷ್ಣ – ಮರು ಶೋಧನೆ

ಹಂಪೆಯಲ್ಲಿರುವ ಬಾಲಕೃಷ್ಣ ಅಥವಾ ಕೃಷ್ಣಸ್ವಾಮಿ ದೇವಾಲಯವು ವಿಜಯನಗರ ಅರಸರ ಕಾಲದ ಒಂದು ಸುಪ್ರಸಿದ್ಧ ದೇವಾಲಯ. ವೈಭವದ ದೃಷ್ಟಿಯಲ್ಲಿ, ವಿರೂಪಾಕ್ಷ ಮತ್ತು ವಿಜಯವಿಠಲ ದೇವಾಲಯಗಳ ನಂತರದ ಸ್ಥಾನ ಈ ಬಾಲಕೃಷ್ಣ ದೇವಾಲಯಕ್ಕೆ ಸಲ್ಲುತ್ತದೆ. ಈ ಮಾತಿಗೆ ಪೂರಕವಾಗಿ ಅನೇಕ ಶಾಸನಗಳು ಮತ್ತು ಐತಿಹ್ಯಗಳು ಬೆಂಬಲವಾಗಿ ನಿಲ್ಲುತ್ತವೆ.

ಶ್ರೀಕೃಷ್ಣದೇವರಾಯನು ಕಳಿಂಗ ದಿಗ್ವಿಜಯದ ಸಂದರ್ಭದಲ್ಲಿ (ಕ್ರಿ.ಶ. 1513 ರಲ್ಲಿ) ಉದಯಗಿರಿ ಕೋಟೆಯನ್ನು ವಶಪಡಿಸಿಕೊಂಡನು. ಅದರ ನೆನಪಿಗೆ ವಿಜಯನಗರಕ್ಕೆ ಬರುವಾಗ ಅಲ್ಲಿಂದ ಬಾಲಕೃಷ್ಣನ ಮೂರ್ತಿಯೊಂದನ್ನು ತಂದು ಕ್ರಿ.ಶ. 1514, ಫೆಬ್ರವರಿ ತಿಂಗಳು 19ನೇ ದಿನಾಂಕದಂದು ಪ್ರತಿಷ್ಠೆ ಮಾಡುತ್ತಾನೆ. 1 ಪ್ರತಿಷ್ಠಾ ಕಾಲದಲ್ಲಿ ಶ್ರೀ ಕೃಷ್ಣದೇವರಾಯನು ಬಾಲಕೃಷ್ಣ ದೇವರಿಗೆ ನವರತ್ನ ಖಚಿತವಾದ ಅನೇಕ ವಿಧದ ಆಭರಣಗಳನ್ನು, ಚಿನ್ನ ಮತ್ತು ಬೆಳ್ಳಿಯ ಉಪಕರಣಗಳನ್ನು ನೀಡುವುದಲ್ಲದೆ ಅನೇಕ ಬ್ರಾಹ್ಮಣರಿಗೆ ಹಲವು ಗ್ರಾಮಗಳನ್ನು ದಾನ ನೀಡುತ್ತಾನೆ. ಆ ಗ್ರಾಮದಾನಗಳಲ್ಲಿ ಪ್ರಮುಖವಾಗಿ ಕಂಡುಬರುವ ಹೆಸರು–ಅತ್ತಿವಟ್ಟಿ. ಬಾಲಕೃಷ್ಣ ದೇವಾಲಯದಲ್ಲಿರುವ ಶಾಸನಗಳ ಪ್ರಕಾರ ಅತ್ತಿವಟ್ಟಿ ಗ್ರಾಮದ ಗದ್ದೆ ಮತ್ತು ಅದರ ಉತ್ಪತ್ತಿಯನ್ನು ಹತ್ತೊಂಬತ್ತು ಜನ ಬ್ರಾಹ್ಮಣರಿಗೆ ದಾನ ನೀಡಲಾಗಿದೆ. 2 ಹಾಗೆಯೇ ಆ ಗ್ರಾಮದ ತೆರಿಗೆ ಉತ್ಪತ್ತಿಯನ್ನು ಬೇರೆ ಬೇರೆ ಕಾರ್ಯದ ಬ್ರಾಹ್ಮಣರಿಗೆ ದಾನ ನೀಡಿದ ವಿವರವೂ ಇದೆ. 3 ಶಾಸನೋಕ್ತ ಅತ್ತಿವಟ್ಟಿ ಗ್ರಾಮವು ಇಂದು 'ಹತೋಟಿ' ಎಂಬ ಹೆಸರಿನ ಹಾಳೂರಾಗಿದೆ. ಇದು ಬಂಡಿಹರ್ಲಾಪುರದ ದಕ್ಷಿಣಕ್ಕೆ ನಗರಗಡ್ಡಿ ಮಠದ ದಾರಿಯಲ್ಲಿರುವ ಗುಡ್ಡದ ಬುಡದಲ್ಲಿದೆ. ಈ ಹಾಳೂರಿನಲ್ಲಿ ಶ್ರೀಕೃಷ್ಣದೇವರಾಯನ ಒಂದು ಶಾಸನವು ಪತ್ತೆಯಾಗಿದ್ದು, ಇದು ಹಂಪಿಯ ಬಾಲಕೃಷ್ಣದೇವಾಲಯಕ್ಕೆ ಸಂಬಂಧಪಟ್ಟಂತೆ ಅನೇಕ ಕುತೂಹಲದನ ವಿಷಯಗಳನ್ನು ತಿಳಿಸುತ್ತದೆ. ಹಾಳೂರಿನ ಗುಡ್ಡದ ಬುಡದಲ್ಲಿ ಒಂದು ದೊಡ್ಡ ಬಂಡೆಯ ಮೇಲೆ ಈ ಶಾಸನವನ್ನು ಕೆತ್ತಲಾಗಿದ್ದು ಅದು ಸುಣ್ಣದ ಲೇಪನದಿಂದ ಮುಚ್ಚಿಕೊಂಡಿತ್ತು. ಈ ಶಾಸನದ ಮೇಲ್ಭಾಗದಲ್ಲಿ ಶಾಸನದ ರಕ್ಷಣೆಗೊ ಅಥವಾ ಶಾಸನದ ಜೊತೆಯಿರುವ ಶಿಲ್ಪದ ರಕ್ಷಣೆಗೊ ಒಂದು ಸಾಧಾರಣ ಶಿಲಾಮಂಟಪವನ್ನು ನಿರ್ಮಿಸಲಾಗಿದೆ. ಇದರಿಂದಾಗಿ ಮೇಲ್ನೋಟಕ್ಕೆ ಬಂಡೆಯ ಮೇಲಿರುವ ಶಾಸನ ಕಾಣಿಸುವುದಿಲ್ಲ.

ಶ್ರೀಕೃಷ್ಣದೇವರಾಯನ ಅವಧಿಯ ಈ ಶಾಸನದ ಕಾಲ 'ಜಯಾದ್ಭುದಯ ಶಾಲಿವಾಹನ ಶಕೆ 1436ನೆಯ ಭಾವಸಂವತ್ಸರದ ಫಾಲ್ಗುಣ ಶುದ್ಧ 3 ಶನಿವಾರದಲು' ಎಂದಿದೆ. ಅಂದರೆ ಕ್ರಿ.ಶ. 1515 ಫೆಬ್ರವರಿ 20ನೇ ತಾರೀಖು ಆಗುತ್ತದೆ. ಶಾಸನವು ಒಟ್ಟು 10 ಸಾಲುಗಳನ್ನು ಒಳಗೊಂಡಿದ್ದು ಅದರ ಲಿಪಿಯು ಬಹಳ ಸ್ಫುಟವಾಗಿ ಪ್ರಮಾಣಬದ್ಧವಾಗಿದೆ.



ಪ್ರೊ.ಡಿ.ವಿ.ಪರಮಶಿವಮೂರ್ತಿ
ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ

Hampi Times E-paper
SCAN AND READ

ಶಾಸನದ ಆರಂಭದಲ್ಲಿ 'ಶುಭಮಸ್ತು ಶ್ರೀ ಬಾಲಕೃಷ್ಣದೇವರ ಗ್ರಾಮ' ಎಂದಿದ್ದು ನಂತರ ಕಾಲದ ಉಲ್ಲೇಖವಿದೆ. ಶ್ರೀ ಕೃಷ್ಣದೇವರಾಯನು ಬಾಲಕೃಷ್ಣದೇವರ ಪ್ರತಿಷಾವಿ ಕಾಲದಲ್ಲಿ ದೇವರ ಸೇವೆಗಾಗಿ ಹುಲಿಗೆಯ ಮಾಗಣಿಗೆ ಸಲ್ಲುವ ಅತ್ತಿವಟ್ಟಿ ಗ್ರಾಮವನ್ನು ತಂದೆ ನರಸಣ್ಣನಾಯಕ ಮತ್ತು ತಾಯಿ ನಾಗಲಾದೇವಿ ಅಂಮನವರಿಗೆ ಧರ್ಮವಾಗಲೆಂದು ದಾನ ನೀಡಿದ ವಿಷಯವಿದೆ. ಕೊನೆಯಲ್ಲಿ ಶಾಪಾಶಯವಿದ್ದು ಶಾಸನ ಪಾಠದ ಮೇಲ್ಭಾಗ ಮತ್ತು ಕೆಳಭಾಗದಲ್ಲಿ ದೊಡ್ಡದಾಗಿ ಬಲಗೈಯಲ್ಲಿ ಬೆಣ್ಣೆ ಹಿಡಿದು ಅಂಬೆಗಾಲಲ್ಲಿ ಕುಳಿತ ಬಾಲಕೃಷ್ಣನ ಉಬ್ಬು ಶಿಲ್ಪವನ್ನು ಕೆತ್ತಲಾಗಿದೆ. ಶಾಸನ ಪಾಠವು ಸಾಮಾನ್ಯ ಶೈಲಿಯಲ್ಲಿದ್ದರೂ ಇದರಲ್ಲಿ ಬಳಸಿರುವ ಎರಡು ಪದಗಳು ಬಹಳ ಮುಖ್ಯವಾದುದಾಗಿವೆ.

ಮೊದಲನೆಯದಾಗಿ ಶಾಸನದಲ್ಲಿ ಅತ್ತಿವಟ್ಟಿ ಗ್ರಾಮವನ್ನು "......ಅಮೃತಪಡಿ ಅಂಗರಂಗ ವೈಭವ ಚೈತ್ರಮಾಸದ ರಥೋತ್ಸವ ನಿತ್ಯನೈಮಿತ್ತಿಕ ದೀಪಾರಾಧನೆಗಳು ಪಂಚಪರ್ವ ಯುಗಾದಿಮನಾದಿ ಅಯನ ಗಜಛಾಯಾ ಪಥಕೆ ಗ್ರಹಣ ಸಂಕ್ರಾಂತಿ ಮಾಸೋತ್ಸವ ಪಕ್ಷೋತ್ಸವ ನಿತ್ಯೋತ್ಸವ ಜಲಾಷವಿಮಿ ಮಹೋತ್ಸವ...." ಮುಂತಾದ ಕಾರ್ಯಗಳಿಗೆ ದಾನ ನೀಡಲಾಗಿದೆಯೆಂದು ಹೇಳುವ ವರ್ಣನೆಯಲ್ಲಿ 'ಗಜಛಾಯಾಪಥಕೆ' ಎಂಬ ಪದವು ವಿಶೇಷವಾದುದಾಗಿದೆ. ಈ ಶಬ್ದ ಇದೂವರೆಗೂ ಯಾವ ಶಾಸನದಲ್ಲೂ ಕಂಡುಬಂದಿಲ್ಲ. ನಿಘಂಟುವಿನಲ್ಲಿ 'ಛಾಯಾ' ಎಂದರೆ ನೆಳಲು, ಪ್ರತಿಬಿಂಬ, ಪಡಿಯಚ್ಚು ಎಂದೂ. 4 'ಛಾಯಾಪಥ' ವೆಂದರೆ ಆಕಾಶದಲ್ಲಿ ಕಾಣುವ ಬಿಳಿಯ ರಸ್ತೆಯಂತಿರುವ ಪಥ, ಆಕಾಶಗಂಗೆ ಎಂದೂ, 5 'ಪಥ' ಎಂದರೆ ಹಾದಿ, ದಾರಿ, ಮಾರ್ಗವೆಂದೂ, 6 'ಪಥಕ' ವೆಂದರೆ ಸೈನ್ಯದ ಒಂದು ತುಕಡಿ, ತಂಡ,



### ಶಾಸನ ಪಾಠ

1. ಶುಭಮಸ್ತು ಶ್ರೀ ಬಾಲಕೃಷ್ಣದೇವರ ಗ್ರಾಮ ಸ್ವಸ್ತಿ ಶ್ರೀ ಜಯದ್ಬುದಯ ಶಾಲಿವಾಹನ ಶಕ 1436
2. ನೆಯ ಬಾವಸಂವತ್ಸರದ ಪಾಲ್ಗುಣ ಶುದ್ಧ 3 ಶನಿವಾರದಲು ಶ್ರೀ ಮನ್ಮಹಾರಾಜಾಧಿರಾಜ ಪರಮೇಶ್ವರ ಶ್ರೀ ವೀರ ಪ್ರತಾಪ ಶ್ರೀಕೃಷ್ಣರಾಯ ಮಹಾರಾಯರು
3. ಶ್ರೀ ಬಾಲಕೃಷ್ಣದೇವರ ಪ್ರತಿಷಾವಿ ಕಾಲದಲ್ಲಿ ಅಮೃತಪಡಿ ಅಂಗರಂಗ ವೈಭವ ಚೈತ್ರಮಾಸದ ರಥೋತ್ಸವ ನಿತ್ಯ ನೈಮಿತ್ತಿಕ ದೀಪಾರಾಧನೆಗಳು ಪಂಚಪರ್ವ
4. ಯುಗಾದಿಮನಾದಿ ಅಯನ ಗಜಛಾಯಾ ಪಥಕೆ ಗ್ರಹಣ ಸಂಕ್ರಾಂತಿ ಮಾಸೋಛವ ಪಕ್ಷೋಛವ ನಿತ್ಯೋಛವ ಜಲಾಷವಿಮಿ ಮಹೋಛವಗಳಿಗಾಗಿ ಸಮರ್ಪಿಸಿದ
5. ಹುಲಿಗೆಯ ಮಾಗಣೆಯವೊಳಗಣ ಅತ್ತಿವಟ್ಟಿ ಅಂಬಾಗ್ರಾಮಕ್ಕೆ ಸಲುವ ನೀರಾಡಂಭ ಕಾಡಾರಂಭ ಗಂಗಾಗವಿದೊಳಗಣ ಕಾಜುವ ಖಾಲಾಹೊಸಹಳ್ಳಿ ಸೆಣಬಿನ ಕಟಿಗೆ
6. ಪೇಟೆವೊಳಗಾದ ಆ ಗ್ರಾಮಕೆ ಸಲುವ ಸುಂಕ ತಳವಾಟಿಕೆ ಜೋಡಿ ಬಿರಾಡಕ ಸಾಮ್ಯ ಸಕಲ ಸುವರ್ನಾದಾಯ ಸಕಲ ಬತ್ತಾದಾಯ ಅನು ದತ್ತಜೀವಾಮೃತ ಸಂಬಂದನು
7. ನಂಮ ತಂದೆ ನರಸಣನಾಯಕರಾದಿಯಾಗಿ ನಂಮತಾಯಿಗಳು ನಾಗಲಾದೇವಿ ಅಂಮನವರಿಗೆ ಯೀ ಧರ್ಮವಾಗಿ ಭಾವ ಸಂವತ್ಸರದ ಪಾಲ್ಗುಣ ಶು3 ಶನಿವಾರದಲು ಶ್ರೀಬಾಲಕೃಷ್ಣದೇವರ ಪ್ರತಿ
8. ಷ್ಟಾ ಕಾಲದಲು ಸರ್ವಮಾನ್ಯವಾಗಿ ಆ ಚಂದ್ರಾರ್ಕ ಸ್ಥಾಯಿ ಆಗಿ ನಡೆವ ಮರ್ಯಾದೆಯಲು ದಾರಾಪೂರ್ವಕವಾಗಿ ಸಮರ್ಪಿಸಿದೆವು ಯೀ ಧರ್ಮಕೆ ಆರೋಬ್ಬರು ಅಳುಪಿದರೆ ತಂಮ ಮತಾ ಪಿತ್ರು
9. ಗಳನು ವಾರಣಾಸಿಯಲ್ಲಿ ವಧಿಸಿದ ಪಾತಕಕೆ ಹೋಹರು ಬ್ರಹ್ಮಹತ್ಯ ಗೋಹತ್ಯ ಸ್ತ್ರೀಹತ್ಯ ಬ್ರಾಹ್ಮಣ ಹತ್ಯ ಪಾತಕಕೆ ಹೋಹರು ಸ್ವದತ್ತಾಂ ಪಾಲನಂ ಪರದ ತ್ತಾಪ ಹಾರೇಣ.... ಸಾಮಾನ್ಯೋಯಂ ಧರ್ಮಸೇತುಂ ನೃಪಾಣಾಂ ಕಾಲೇ ಕಾಲೇ ಪಾಲನಿಯೋಭವದ್ಭಿಃ.

( ಈ ಶಾಸನ ಈಗ ಕವಿವಿ ಶಾಸನ ಸಂಪುಟ ಎರಡರಲ್ಲಿ ಪ್ರಕಟವಾಗಿದೆ.)

ಸಂಘ, ಗುಂಪು ಎಂದೂ 7 ಅರ್ಥ ನೀಡಲಾಗಿದೆ. ಆದರೆ ಶಾಸನದ ಸಂದರ್ಭದಲ್ಲಿ ಈ ಅರ್ಥವು ಬೇರೆಯದೇ ಆಗುತ್ತದೆಂದು ನಮ್ಮ ಭಾವನೆ. ಹಬ್ಬ, ಉತ್ಸವ ಮತ್ತು ಜಾತ್ರೆಗಳ ಸಂದರ್ಭದಲ್ಲಿ ದೇವರ ಮೆರವಣಿಗೆಯ ಮುಂದೆ ಅಲಂಕೃತಗೊಂಡ ಆನೆ ಅಥವಾ ಅನೇಕ ಆನೆಗಳ ಮೆರವಣಿಗೆಯನ್ನು 'ಗಜಛಾಯಾಪಥ' ಎಂಬ ಶಬ್ದವು ಸೂಚಿಸುತ್ತಿರಬೇಕು. ಗಜ ಎಂಬುದು ಆನೆಯನ್ನು, ಛಾಯ ಎಂಬುದು ಕನ್ನಡಿ ಮತ್ತು ಲಾಂಛನಗಳನ್ನು, ಪಥ ಎಂಬುದು ಮೆರವಣಿಗೆಯನ್ನು ಸೂಚಿಸುತ್ತದೆ. ಕಳಸ–ಕನ್ನಡಿ ಮತ್ತು ಲಾಂಛನಗಳೊಂದಿಗೆ ಆನೆಗಳ ಮೆರವಣಿಗೆ ಅಥವಾ ಪಥಸಂಚಲನ (March Fast) ವೆಂದು ಹೇಳಬಹುದು. ದೇವರ ಉತ್ಸವಮೂರ್ತಿಯನ್ನು ಬೆನ್ನಮೇಲೆ ಹೊತ್ತು ಸಾಗುವುದನ್ನೂ ಈ ಶಬ್ದ ಸೂಚಿಸುತ್ತಿರಬೇಕು. ಇದೇ ಸಂಪ್ರದಾಯ ಈಗಿನ ದಸರಾ ಉತ್ಸವದಲ್ಲಿ ಮುಂದುವರಿದಿರುವುದನ್ನು ಕಾಣಬಹುದು. ಈ ರೀತಿಯ ಮೆರವಣಿಗೆಯಲ್ಲಿ ಭಾಗವಹಿಸುವ ಆನೆಗಳ ನಿರ್ವಹಣೆಗೆ, ಮಾವುತರ ಜೀವನಕ್ಕೆ, ಮೆರವಣಿಗೆಯ ಸಮಯದಲ್ಲಿ ಆನೆಗಳ ಅಲಂಕಾರದ ಪರಿಕರಗಳಿಗೆ ದಾನ–ದತ್ತಿಯನ್ನು ನೀಡಿರಬೇಕು. ಇದರಿಂದಾಗಿ ವಿಜಯನಗರ ಅರಸರ ಕಾಲದಲ್ಲಿ ದೇವಾಲಯಗಳ ಆಚರಣೆಗಳಲ್ಲಿ ಆನೆಗಳಿಗೆ ಪ್ರಮುಖ ಸ್ಥಾನವಿತ್ತೆಂದು ತಿಳಿದು ಬರುವುದಲ್ಲದೆ ಇಂತಹ ಆನೆಗಳ ಬಗ್ಗೆ ವಿಶೇಷ ಗಮನವನ್ನು ನೀಡಲಾಗುತ್ತಿತ್ತೆಂದು ಈ ಶಾಸನದಿಂದ ತಿಳಿಯಬಹುದು.

ಎರಡನೆಯದಾಗಿ ದಾನ ನೀಡಿದ ಗ್ರಾಮದ ವಿವರವನ್ನು ತಿಳಿಸುವಾಗ 'ಸಣಬಿನ ಕಟ್ಟಿಗೆ ಪೇಟೆ' ಎಂಬ ಸ್ಥಳದ ಉಲ್ಲೇಖವಿದೆ. ಸಣಬಿನ ಕಟ್ಟಿಗೆ ಪೇಟೆ ಎಂದರೆ ಸೆಣಬಿನ ಕಟ್ಟಿಗೆಯನ್ನು ಮಾರುವ ಪೇಟೆ ಎಂದೇ ಅರ್ಥ. ಸೆಣಬು ಯಾವ ಕಾಲದಿಂದ ನಮ್ಮಲ್ಲಿ ಬಳಕೆಯಲ್ಲಿತ್ತು ಎಂಬುದಕ್ಕೆ ಯಾವ ಪ್ರಾಚೀನ ದಾಖಲೆಯೂ ನಮಗೆ ಇದೂವರೆಗೂ ದೊರಕಿಲ್ಲ. ಈ ಶಾಸನದಲ್ಲಿ ಸೆಣಬು ಹಾಗೂ ಅದರ ಕಟ್ಟಿಗೆಯನ್ನು ಮಾರುವ ಪೇಟೆಯೇ ಇತ್ತೆಂದು ಮೊಟ್ಟ ಮೊದಲಿಗೆ ಉಲ್ಲೇಖವಿರುವುದರಿಂದ ಈ ಶಾಸನದ ಕಾಲಕ್ಕಿಂತಲೂ ಪೂರ್ವದಲ್ಲೇ ಅಂದರೆ ಕ್ರಿ.ಶ. 1514ಕ್ಕೂ ಮೊದಲೇ ಸೆಣಬಿನ ಬಳಕೆ ನಮ್ಮಲ್ಲಿತ್ತೆಂದು ತಿಳಿದುಬರುತ್ತದೆ. ಕೃಷಿ ಬಳಕೆಯಲ್ಲಿ ಸೆಣಬು ಇಂದಿಗೂ ಬಹಳ ಪ್ರಮುಖವಾದ ಸಸ್ಯವಾಗಿದೆ. ಹಂಪೆ ಹಾಗೂ ಅದರ ಸುತ್ತಲ ಪರಿಸರದಲ್ಲಿ ಇಂದಿಗೂ ಬತ್ತದ ಕೃಷಿಯಲ್ಲಿ ಸೆಣಬು ಸಸ್ಯಗೊಬ್ಬರವಾಗಿ ಉಪಯೋಗದಲ್ಲಿದೆ. ಬತ್ತದ ನಾಟಿಯ ಮೊದಲು ಸೆಣಬಿನ ಸೊಪ್ಪನ್ನು ಮಣ್ಣಿನೊಂದಿಗೆ ಬೆರೆಸುತ್ತಾರೆ. ಇದು ಕೊಳೆತು ಬಹಳ ಫಲವತ್ತಾದ ಗೊಬ್ಬರವಾಗಿ ಮಾರ್ಪಟ್ಟು ಅಧಿಕ ಇಳುವರಿಗೆ ಕಾರಣವಾಗುತ್ತದೆ. ಬಹುಶಃ ಶಾಸನದ ಕಾಲದಲ್ಲೂ ಸೆಣಬನ್ನು ಇದೇ ಕಾರಣಕ್ಕೆ ವ್ಯಾಪಕವಾಗಿ ಬಳಸುತ್ತಿದ್ದಿರಬೇಕು. ಇದರ ಮಾರಾಟವೂ ಲಾಭದಾಯಕ ವೃತ್ತಿಯಾಗಿದ್ದು ಅದಕ್ಕಾಗಿಯೇ ಪೇಟೆಯೂ ನಿರ್ಮಾಣಗೊಂಡಿತ್ತೆಂದು ತಿಳಿಯಬಹುದಾಗಿದೆ.

ಈ ಶಾಸನದ ಶಿಲ್ಪವೂ ಬಹಳ ಮುಖ್ಯವಾಗಿದೆ. ಶಾಸನದ ಮೇಲೆ ಮತ್ತು ಕೆಳಭಾಗದಲ್ಲಿ ಅಂಗೈಯಲ್ಲಿ ಬೆಣ್ಣೆಯನ್ನು ಹಿಡಿದ ಅಂಬೆಗಾಲ ಬಾಲಕೃಷ್ಣನ ಶಿಲ್ಪವನ್ನು ಕೆತ್ತಲಾಗಿದೆ. ಶಾಸನದ ಕೆಳಭಾಗದಲ್ಲಿರುವ ಶಿಲ್ಪ ಒಂದೂವರೆ ಅಡಿ ಎತ್ತರ, ಮೂರೂವರೆ ಅಡಿ ಉದ್ದವಾಗಿಯೂ ಇದ್ದು, ಇದು ಹಂಪಿಯ ಬಾಲಕೃಷ್ಣ ಗುಡಿಯಲ್ಲಿ ಶ್ರೀಕೃಷ್ಣದೇವ ರಾಯನು ಉದಯಗಿರಿಯಿಂದ ತಂದು ಪ್ರತಿಷಾವಿಪಿಸಿದನೆಂದು ಹೇಳಲಾದ ಬಾಲಕೃಷ್ಣಮೂರ್ತಿಯ ಪ್ರತಿರೂಪವಾಗಿರಬಹುದು. ಆದರೆ ಡಾ. ಸಿ. ಶಿವರಾಮಮೂರ್ತಿ ಯವರ ಹೇಳಿಕೆಯ ಪ್ರಕಾರ ಈ ಗುಡಿಯಲ್ಲಿ ಪ್ರತಿಷಾವಿಪಿಸಿದ್ದ ಮೂರ್ತಿಯು ಪೀಠದಲ್ಲಿ ಕುಳಿತ ಕೃಷ್ಣನದ್ದಾಗಿದೆಯೆಂದು ತಿಳಿದುಬರುತ್ತದೆ. 8 ಇದರಿಂದ ಒಂದು ಸಮಸ್ಯೆ ಉಂಟಾಗುತ್ತದೆ. ಅದೇನೆಂದರೆ ಕೃಷ್ಣದೇವರಾಯನು ಉದಯಗಿರಿಯಿಂದ ತಂದ ಮೂರ್ತಿ ಅಂಬೆಗಾಲಿನ ಬಾಲಕೃಷ್ಣನ ಮೂರ್ತಿಯೊ ಅಥವಾ ಕುಳಿತ ಭಂಗಿಯಲ್ಲಿರುವ ಕೃಷ್ಣನೊ ಎಂಬ ಅನುಮಾನ ಉಂಟಾಗುತ್ತದೆ. ವಿದ್ವಾಂಸರೊಬ್ಬರು ಬಾಲಕೃಷ್ಣ ಗುಡಿಯಲ್ಲಿರುವ ಮುಖಮಂಟಪದ ಕಂಬವೊಂದರಲ್ಲಿ ಅಂಬೆಗಾಲ ಬಾಲಕೃಷ್ಣನ ಮೂರ್ತಿಯ ಮುಂದೆ ತ್ರಿಭಂಗಿಯಲ್ಲಿ ನಿಂತಿರುವ ಕೃಷ್ಣದೇವರಾಯನನ್ನು ಗುರುತಿಸಿದ್ದಾರೆ. 9 ಈ ಊಹಿತ ಆಧಾರವೊಂದನ್ನು ಹೊರತುಪಡಿಸಿದರೆ ಬಾಲಕೃಷ್ಣನ ಮೂರ್ತಿ ಸ್ವರೂಪದ ಬಗೆಗೆ ಯಾವ ದಾಖಲೆಯೂ ಇಲ್ಲ. ಆದರೆ ಈ ಅತ್ತಿವಟ್ಟಿ ಶಾಸನದಲ್ಲಿರುವ ಶಿಲ್ಪದ ಆಧಾರದಿಂದ ಶ್ರೀ ಕೃಷ್ಣದೇವರಾಯನು ಹಂಪಿಯ ಬಾಲಕೃಷ್ಣನ ಗುಡಿಯಲ್ಲಿ ಪ್ರತಿಷ್ಠಾಪಿಸಿದ ಮೂರ್ತಿಯು ಕೈಯಲ್ಲಿ ಬೆಣ್ಣೆ ಹಿಡಿದ ಅಂಬೆಗಾಲಿನ ಬಾಲಕೃಷ್ಣನ ಮೂರ್ತಿಯಾಗಿತ್ತೆಂದು ಹೇಳಬಹುದಾಗಿದೆ. ಈ ಶಾಸನವನ್ನು ಬಾಲಕೃಷ್ಣನ ಪ್ರತಿಷೆವಿಯಾದ ಮರುದಿನವೇ ಹಾಕಿಸಿರುವುದರಿಂದ ಇದು ಅಧಿಕೃತವಾದ ದಾಖಲೆಯಾಗಿದೆ. ಈಗ ಮದ್ರಾಸ್ ಮ್ಯೂಸಿಯಂನಲ್ಲಿರುವ ಮೂರ್ತಿಯು ಬಾಲಕೃಷ್ಣ ಗುಡಿಯಲ್ಲಿದ್ದ ಮೂಲಮೂರ್ತಿ ಯಲ್ಲವೆಂದು ಹೇಳಬಹುದು. ಅಥವಾ ಶತ್ರುಗಳ ಧಾಳಿಗೇನಾದರೂ ಮೂಲಮೂರ್ತಿ ಭಗ್ನವಾಗಿ ಅದರ ಸ್ಥಳದಲ್ಲಿ ಕುಳಿತ ಭಂಗಿಯ ಕೃಷ್ಣನ ಮೂರ್ತಿಯನ್ನು ಆ ನಂತರದಲ್ಲಿ ಪ್ರತಿಷಾವಿಪಿಸಿರ ಬಹುದು.

ಹೀಗೆ ಅತ್ತಿವಟ್ಟಿ (ಹತೋಟಿ) ಗ್ರಾಮದಲ್ಲಿ ದೊರಕಿರುವ ಹೊಸ ಶಾಸನವು ಹಂಪಿಯ ಬಾಲಕೃಷ್ಣಗುಡಿಯ ಆಚರಣೆಗಳ ಬಗ್ಗೆ ಮತ್ತು ಅಲ್ಲಿನ ಮೂಲ ಮೂರ್ತಿಯ ಸ್ವರೂಪದ ಬಗೆಗೆ ತಿಳಿಸುವುದಲ್ಲದೆ ಆ ಕಾಲದ ಸಾವಯವ ಕೃಷಿವ್ಯವಸ್ಥೆಯ ಬಗೆಗೂ ಹೊಸ ಬೆಳಕನ್ನು ಚೆಲ್ಲುತ್ತದೆ.

**ಆಧಾರ ಸೂಚಿ ಮತ್ತು ಟಿಪ್ಪಣಿಗಳು:**

01. ಎಸ್.ಐ.ಐ. ಖಗಿ ಸಂಖ್ಯೆ 254, 255.
02. ಎಸ್.ಐ.ಐ. ಖಗಿ ಸಂಖ್ಯೆ 254.
03. ಎಸ್.ಐ.ಐ. ಖಗಿ ಸಂಖ್ಯೆ 255.
04. ಕನ್ನಡ ನಿಘಂಟು ಸಂ.2, ಪುಟ 2929.
05. ಅದೇ, ಸಂ.2, ಪುಟ 2930.
06. ಅದೇ, ಸಂ.5, ಪುಟ 5208.
07. ಅದೇ, ಸಂ.5, ಪುಟ 5209.
08. C. Shivarama Murthy, Balakrishna from Hampi in the Madras Museum. Journal of Oriental Research, Madras, vol–10.1936.
09. ಡಾ. ಎಸ್. ರಾಜಶೇಖರ್., ಹಂಪೆಯ ಕೃಷ್ಣದೇವರಾಯನ ಅಪೂರ್ವ ವಿಗ್ರಹ. ಇತಿಹಾಸ ದರ್ಶನ, ಸಂಪುಟ–2, 1987, ಪುಟ. 23.

## ಕವಿ ಮನಸು

### ಮಳೆರಾಯನ ರಂಗೋಲಿ

ನೆಲದಲ್ಲಿ ರಂಗೋಲಿ
ಬಿಡಿಸಿದನು ಮಳೆರಾಯ
ಸೋಜಿಗವ ತೆರೆದಿಟ್ಟ ನೋಡಿರಣ್ಣ

ವೃತ್ತವಿದೆ ನಡುವಲ್ಲಿ
ಒಳಗೆಲ್ಲ ಕಡುನೀಲಿ
ಪರಿಧಿಗವ ಬಳಿದಿರುವ ಹಸಿರು ಬಣ್ಣ

ಹೊರಗೆಲ್ಲ ಕೆಂಬಣ್ಣ
ಹಿತ್ತಿಲಿನ ಸೊಗಸನ್ನ
ಹೆಚ್ಚಿಸುವ ಕಾಯಕವು ಸೆಳೆಯೆ ಕಣ್ಣ

ಇದ್ದಿಲಿನ ತುಣುಕಲ್ಲಿ
ಲಂಬದಲಿ ಗೆರೆ ಎಳೆದ
ಗಿಡಗಳದೆ ಬುಡದಂತೆ ಬಹಳ ಚೆನ್ನ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಮಳೆ ಹನಿಗಳು

ಬಿಸಿಲಿನ ಬೀಜದಲಿ ಅಂಕುರಿಸಿವೆ
ಮಳೆಯ ಮೊಳಕೆಗಳು,
ಹನಿಗಳು ಬೇರು ಬಿಟ್ಟು,
ಬೆಳೆಯುತಿದೆ ಮಿಂಚಿನ ಬಳ್ಳಿ,
ಮೋಡಗಳ ಎಲೆಗಳ ಮೇಲೆ ಚೆಲ್ಲಿದೆ
ಕಾಮನಬಿಲ್ಲು,
ಸೂಜಿಮಲ್ಲಿಗೆಯ ಹನಿಗಳು ಬಿರಿದು ಹರಡಿವೆ
ಪರಿಮಳವ,
ಆಲೀಕಲ್ಲಿನ ಕಾಯಿಗಳು ಸುರಿದಿವೆ
ಬಳ್ಳಿಯತುಂಬ,
ಬಳ್ಳಿ ಬಳುಕಲು ಶಿಳ್ಳೆಹಾಕುತಿವೆ ಪಡ್ಡೆ
ಗುಡುಗುಗಳು,
ಸಿಡಿಲಿನ ಕೋಪಕೆ ಅಂಜಿ,
ಮೋಡದ ಎಲೆಗಳ ಹಿಂದೆ ಅಡಗಿವೆ
ತಟಪಟ ಮರಿ ಹನಿಗಳು ...
ನದಿ ತಾಯಿಯ ಮಡಿಲು ಸೇರಿ,
ಸಾಗರ ಅಜ್ಜಿಯ ಮನೆಗೆ ಸಾಗುತಿವೆ ಮಳೆ
ಹನಿಗಳು

– ಪ್ರಸನ್ನ ಜಾಲವಾದಿ ಬೆಂಗಳೂರು

## ವಿಶ್ವ ಮೆದುಳು ದಿನಾಚರಣೆ ಕಾರ್ಯಕ್ರಮ




ಹಂಪಿ ಟೈಮ್ಸ್ ಕೊಪ್ಪಳ

ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾಬೋಧಕ ಆಸ್ಪತ್ರೆಯ ಸಹಯೋಗದಲ್ಲಿ ಜುಲೈ 22ರಂದು ಜಿಲ್ಲಾಸ್ಪತ್ರೆಯಲ್ಲಿ ವಿಶ್ವ ಮೆದುಳು ದಿನವನ್ನು

ಜಿಲ್ಲಾ ಕುಷ್ಠ ರೋಗ ನಿರಮೂಲನ ಅಧಿಕಾರಿಗಳು ಹಾಗೂ ಜಿಲ್ಲಾ ಮಾನಸಿಕ ಆರೋಗ್ಯ ಅಧಿಕಾರಿಗಳಾದ ಡಾ.ಪ್ರಕಾಶ್ ಅವರು, ಮೆದುಳಿನ ಆರೋಗ್ಯ, ಅದರ ರಕ್ಷಣೆ ಹಾಗೂ ಮಾನಸಿಕ ಆರೋಗ್ಯ ವೃದ್ಧಿಸಿಕೊಳ್ಳ ಕುರಿತು ಮತ್ತು ಮೆದುಳಿನ ಆರೋಗ್ಯಕ್ಕೆ ಸಂಬಂಧಪಟ್ಟಂತಹ ವೈದ್ಯಕೀಯ ಸೌಲಭ್ಯಗಳು, ಜಿಲ್ಲಾಸ್ಪತ್ರೆಯಲ್ಲಿ ಪಡೆದುಕೊಳ್ಳುವಂತಹ ಯೋಜನೆಗಳ ಬಗ್ಗೆ ತಿಳಿಸಿದರು.

ಡಾ.ಸಂಗನಬಸಪ್ಪ ಮಾತನಾಡಿ, ಮೆದುಳಿನ ಆರೋಗ್ಯವು ಅತ್ಯಂತ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡಿರುತ್ತದೆ ಎಂದರು. ಪಾರ್ಸಿ, ಪಿಡ್ ತಲೆನೋವು, ಮರುವಿನ ಕಾಯಿಲೆ ಇನ್ನೂ ಅನೇಕ ತರನಾದಂತಹ ನರರೋಗದ ಸಮಸ್ಯೆಗಳಿಗೆ ವೈದ್ಯಕೀಯ ತುರ್ತು ಸೌಲಭ್ಯವನ್ನು ಪಡೆದುಕೊಳ್ಳ ಬಗ್ಗೆ ತಿಳಿಸಿದರು.

ಕರ್ನಾಟಕ ಬ್ರೌನ್ ಹೆಲ್ತ್ ಇನಿಶಿಯೇಟಿವ್ ಕೊಪ್ಪಳ ಜಿಲ್ಲಾ ಸಂಯೋಜಕರಾದ ನವೀನ್ ಮಾತ ನಾಡಿ, ರಾಜ್ಯ ಸರ್ಕಾರದ ಕುಟುಂಬ ಕಲ್ಯಾಣ ಇಲಾಖೆ ಹಾಗೂ ನಿಮಾನ್ ಸಹಯೋಗದೊಂದಿಗೆ ಕರ್ನಾಟಕ ಬ್ರೈನ್ ಹೆಲ್ ಕ್ಲಿನಿಕ್ ಗಳನ್ನು 32 ಜಿಲ್ಲಾ ಆಸ್ಪತ್ರೆಗಳಲ್ಲಿ ಪ್ರಾರಂಭಿಸಲಾಗಿದೆ. ಇಲ್ಲಿ ಪಾರ್ಸಿ ಬೀಟ್ಸ್, ತಲೆನೋವು, ನರರೋಗಕ್ಕೆ ಸಂಬಂಧಿಸಿದಂತಹ ಕಾಯಿಲೆಗಳಿಗೆ ಚಿಕಿತ್ಸೆಯನ್ನು ನೀಡಲಾಗುವುದು. ಅವಶ್ಯಕತೆ ಇದ್ದರೆ ನಿಮಾನ್ ತಜ್ಞ ವೈದ್ಯರಿಂದ ಸಲಹೆ ಪಡೆದುಕೊಂಡು ಚಿಕಿತ್ಸೆಯನ್ನು ನೀಡಲಾಗುವುದು ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾಸ್ಪತ್ರೆಯ ವೈದ್ಯಾಧಿಕಾರಿ ಗಳು, ಆರೋಗ್ಯ ಇಲಾಖೆ ಸಿಬ್ಬಂದಿಗಳಿದ್ದರು.

# ಕಣ್ಣಂಚಿನಲಿ ನೀರು... ರಸೂಲ ಮಂಜಾಗಿ ಕಂಡ

– ಶರಣು.ಪಾ.ಹಿರೇಮಠ

ಮೇಲೆ...ಧೋ ಎಂದು ಸುರಿಯುವ ಧಾರಕಾರ ಮಳೆ ನಾನು ಪಯಣಿಸುವ ಕಾರಿನ ಲೈಟ್ ಸಂಪೂರ್ಣ ಕೆಟ್ಟು ಹೋಗಿತ್ತು..ದಿಕ್ಕು ತೋಚದೆ..ಧಾವಂತದಿಂದ ಹುಬ್ಬಳ್ಳಿಯ ಎನ್.ಎಚ್.ರಸ್ತೆಯ ಮೇಲೆ ನಿಂತಿದ್ದೆ ನನ್ನ ಸಾರಥಿ ಸರ್ ಹೆಡ್ ಲೈಟ್ ಹೋಗಿದೆ ರಸ್ತೆ ಕಾಣೋದಿಲ್ಲ...ದಯವಿಟ್ಟು ಮನ್ನಿಸಿ ಎಂದ. ನಾನು ಕೋಪ ಮಾಡಿಕೊಳ್ಳುತ್ತೇನೆ ಎಂದು ಸಾರಥಿಗೆ ಭಯ... ಇರಲಿ ಬಿಡು ಇದು ಟೆಕಿನಿಕಲ್ ಮಿಸ್ ಟೇಕ್ ಎಂದೆ. ಒಳಗಿದ್ದ ಮಕ್ಕಳಿಗೆ ಆತಂಕ ಅದರಲ್ಲೂ ಹೆಣ್ಣು ಮಕ್ಕಳ ಭಯವಂತು ಮುಗಿಲು ಮುಟ್ಟಿರುತ್ತದೆ... ಪಪ್ಪಾ... ಮುಂದೇನು ಯಾವ ವಾಹನ ನಿಲ್ಲಿಸುತ್ತಿಲ್ಲ... ಹೇಗೆ.. ಮಾಡೋದು ಪಪ್ಪಾ ನಮ್ಮ ಸ್ವಪ್ನಳ ಅಳಲು... ಒಳಗಿಂದ ನನ್ನ ಬಂಧುವಿಗಿಂತ ಮಿತ್ರನಿಗಿಂತ ಹಿರಿದಾದ ಜೀವಿ ಅಭಯ ಪಾಟೀಲನ ಮಗಳಿಗೆ ಸಮಾಧಾನ ಮಾಡುವ ಮಾತು ನಾನು ಬೇಡ ಎಂದರು ಧಾರವಾಡಕ್ಕೆ ಹಚ್ಚಬೇಡ ಅಂದರೆ ಕೇಳಲೇ ಇಲ್ಲಾ ನಿಮ್ಮ ದೊಡ್ಡಪ್ಪ.. ಸ್ವಪ್ನ ಮಾತು ಮಾತಿಗೆ ದೊಡ್ಡಪ್ಪನನ್ನು ಬೆಂಬಲಿಸುವ ನೀನು ಎಂತಹ ಬಿಕ್ಕಟ್ಟಿನಲಿ ಸಿಲುಕಿದೆ ನೋಡು ಎಂದ.... ನಾನು ಗದಿರಿದೆ. ಅಭಯ ಹೆದರುವವರ ಮುಂದೆ ಯಾರೋ ಹಾವು ಹಾಕಿದರಂತೆ ಭಯ ಬೇಡ ಯಾರದರೂ ವಾಹನ ನಿಲ್ಲಿಸುತ್ತಾರೆ..ಮಗಳೆ ಅಪ್ಪನ ಮಾತಿಗೆ ಭಯ ಬೇಡ ಈಗಲೂ ಭರವಸೆ ಯಿದೆ





ಯಾರದರೂ ಬರುತ್ತಾರೆ ನಮಗೆ ಸಹಾಯ ಮಾಡುತ್ತಾರೆ ಎಂದೆ... ನಿಮಗೆ ಗೊತ್ತಿರಲಿ ಕತ್ತಲೆಯ ಜೊತೆ ಕಳವಳ ಕೂಡಿದರೆ ಅದರ ಅನುಭವ ಪದಗಳಿಗೆ ಸಿಗದು ಮುಂದೆನಾಗುತ್ತೆ ಅನ್ನುವುದು ಒಳ ಮನದ ತಲ್ಲಣ ಒಳಮನಕೆ ಗೊತ್ತು... ಹೇಗೋ ಒಂದಿಷ್ಟು ದೂರ ಕಾರು ಓಡಿಸದ ನಮ್ಮ ಚಾಲಕ.. ಅಲ್ಲಿ ಒಂದು ಗುಂಪು ಇತ್ತು.. ಅವರಿಂದ ಏನಾದರೂ ಸಹಾಯ ಸಿಗಬಹದು..ಎಂದು ..ನಾನು ಹತ್ತಿರ ಹೋದೆ. ಅವರೆಲ್ಲಾ ಏನೇನು ಮಾತನಾಡುತ್ತಿದ್ದರು. ನನಗೆ ಮುಂದೆ ಹೋಗಬೇಡ ಎಂದು ಅಭಯ ಹೇಳಿದ. ಅಣ್ಣಾ ಅವರು ಯಾರೋ ಗೊತ್ತಿಲ್ಲ. ಅಲ್ಲದೆ ರಾತ್ರಿ ಅವರು ಕುಡಿದಿರ್ತಾರೆ ಎಂದ. ಅದೇನೋ ನನಗೆ ಅನುಮಾನವೇ ಬರಲಿಲ್ಲ. ಅಭಯ ಅವರೊಲ್ಲಬ್ಬ ಬಿಳಿಯ ಪಾಯಿಜಾಮ ಹಾಕಿದಾನೆ. ಗಡ್ಡ ಬಿಟ್ಟಿದಾನೆ. ನನಗೆ ಭರವಸೆಯಿದೆ. ಅವರು ಕುಡಕರಲ್ಲ.. ಅದರಲ್ಲೂ ನಮ್ಮ ಕರ್ನಾಟಕದ ಇಸ್ಲಾಂ ಅನುಯಾಯಿಗಳು ಆ ತರದ ವೇಷ ಹಾಕಿ ಕುಡಿತಕ್ಕೆ ಕೂಡುವುದಿಲ್ಲ ಅದು ನನಗೆ ಗೊತ್ತು ಎಂದೆ. ನನ್ನೊಳಗೆ ಒಂಚೂರು ಭಯ ಇರಲಿಲ್ಲ. ಹತ್ತಿರ ಹೋದೆ ಬಾಯಿಸಾಬ ಅಭಿ ಗದಗ ಕಿತನ ದೂರ ಹೈ ಎಂದೆ....ಕನ್ನಡದಲ್ಲಿ ಉತ್ತರ ಬಂತು..10 ಕಿ.ಮಿ ಇರಬಹದು ಕಾರಿಗೆ ಏನಾಗಿದೆ ಅಂದ ಹೆಡ್ ಲೈಟ ಹತ್ತಾತ ಇಲ್ಲ ಅಂದೆ. ಉಳಿದ ಅವನ ಗೆಳೆಯರು. ಥಟ್ಟನೆಲೇ ರಸೂಲ ನೋಡಲೆ ಪಾಪ ನೀನೆ ಮ್ಯಾಕನಿಕ್ ಇದೆಯಾ ನೋಡಬಾರದ ಸುರಿಯುವ ಮಳೆಯಲಿ ಅವರಿಗೆ ಯಾವ ಗ್ಯಾರೆಜು ಸಿಗುತ್ತೆ ಅಂದರು. ನನಗಾಗ ರಸೂಲ ಅಂತ ಆ ಯುವಕನ ಹೆಸರು ಗೊತ್ತಾಯಿತು. ರಸೂಲ ಕಾರ್ ಚೆಕ್ ಮಾಡಿ ಸಾಬ್ ಹೆಡ್ ಲೈಟ್ ಹೋಗಿದೆ ಹೊಸದು ಹಾಕಬೇಕು..ಅಂದ..ನಿಮ್ಮದೇನು ಅಭ್ಯಂತರ ಇಲ್ಲ. ಅಂದರ ಒಳದಾರಿಯಿದೆ ಮೆಲ್ಲಗೆ ಕಾರು ಚಲಾಯಿಸಿ ಕೊಂಡು ಬನ್ನಿ ನಾನು ವವ್ಯಸ್ಥೆ ಮಾಡುವೆ ಅಂದ. ನಾನು ಹೂಂ ನಡೀರಿ ಅಂದೆ ನನ್ನ ಮಾತಿಗೆ ಮಗಳು ಸ್ವಪ್ನ ದನಿ ಗೂಡಿಸಿದಳು. ಅಭಯ ಮತ್ತವರ ಶ್ರೀಮತಿ ಯಾಕೋ ಮುಖದ ತುಂಬಾ ಪ್ರಶ್ನೆಗಳನು ತುಂಬಿ ಕೊಂಡರು. ನಾನು ಬಲವಂತ ಮಾಡಿ ಕಿರಿದಾದ ಹಾದಿಯಲ್ಲಿ ಕಾರು ನಡೆಸಿಕೊಂಡು ಸುಮಾರು 10 km ಪಯಣ ಮುಂದೆ ಮುಂದೆ ರಸೂಲನ ಯಮಹಾ ಬೈಕ್ ಹಿಂದೆ ನಾವು. ಹತ್ತಾರು ಅಂಗಡಿಯನು ಹುಡಕಾಡಿ ಎಬ್ಬಿಸಿದ. ಕೊನೆಗೆ ಹೆಡ್ ಲೈಟ್ ಕಾರಿಗೆ ಹಾಕಿ ಬೆಳಕು ನೀಡಿದ. ನಾನು.. ರಸೂಲ ಎಷ್ಟಾಯಿತು ಹಣ ಎಂದೆ. ಅಜ್ಜ.. ಆ... ಹೆಡ ಲೈಟನ್ ಹಣ ಮಾತ್ರ ಕೊಡು ನನ್ನದೇನು... ಬೇಡ.. ನಿಮಗೆ ಈ ಹೊತ್ತಿನಲಿ ಸಹಾಯ ಮಾಡೋ ಅವಕಾಶ ಬಂತಲ್ಲಾ... ಅಷ್ಟು ಸಾಕು.. ಇನ್ನೋಮ್ಮೆ ಗದಗ ಗೆ ಬಂದರೆ ನೀವು ಪುಟ್ಟಜ್ಜಯ್ಯನ ಆಶ್ರಮ ನೋಡಬೇಕು.. ಅವರು.. ನಮ್ಮ ಗದಗಿನ ಕಣ್ಣು ಅಂದ... ನಿಜ ಹೇಳುವೆ... ಹೃದಯ ಭಾರ ಆಯಿತು... ಅವನನ್ನು ಕರೆದು ತಬ್ಬಿಕೊಂಡೆ ರಸೂಲ ನೀನು ತುಂಬಾ ಎತ್ತರದವನು... ಅಂದೆ ಅವನು.. ಹೇ.... ಬಿಡಿ.. ಸಾಬ್... ನಾವು.. ನೀವು ಅಣ್ಣ ತಮ್ಮಂದಿರು... ಜಾತಿ.. ಧರ್ಮ ಎಲ್ಲವೂ.. ಪ್ರೇಮ.. ಬಿತ್ತಲು ಇರುತ್ತೆ.. ಅಂದ... ಒಬ್ಬ ದಾರ್ಶನಿಕನ ಹಾಗೆ ಕಂಡ... ಕಣ್ಣುಒದ್ದೆ ಯಾಯಿತು.. .ನನಗೆ... ದಿಟ್ಟಿಸಿ ನೋಡಿದೆ... ಕಣ್ಣಂಚಿನಲಿ.. ನೀರು ತುಂಬಿದ್ದರಿಂದ.. ರಸೂಲ ಮಂಜಾಗಿ ಕಂಡ... ತಕ್ಷಣ ನೀರು.. ಒರೆಸಿಕೊಂಡೆ... ಬರುವೆ.. ತಮ್ಮಾ ಎಂದೆ... ಅಣ್ಣ ..ಹೋಗಿ ಬನ್ನಿ... ಅಂದ.. ಮಗಳು ಸ್ವಪ್ನ ಗೆ... ತಂಗೆವ್ವ ..ಚಲೋ.. ಓದು... ಹೆಸರು ತಗೊಂಡ ಬಾ... ಅಂದ... ರಸೂಲ ಸರಿ ರಾತ್ರಿಯಲಿ ದೇವ ಧೂತನಾಗಿ ಕಂಡ.... ಎರಡು ಕೈ ಮುಗಿದು.. ವಿದಾಯ ಹೇಳಿದೆ... ನಮ್ಮಲ್ಲಿ ಮಾತಿಗೆ ಬರವಿತ್ತು... ಎಲ್ಲಾ ಮಾತುಗಳನು ತನ್ನ ಮೌನದಲಿ ಬಂಧಿಯಾಗಿಸಿದ್ದ.. ರಸೂಲ....

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.


## ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ಕ್ರೋಧಿ

**25–07–2024 – ಗುರುವಾರ**

| | |
|---|---|
| ತಿಥಿ | : ಪಂಚಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಪೂರ್ವಭಾದ್ರಪದ |
| ಯೋಗ | : ಶೋಭನ |
| ಕರಣ | : ಕೌಳವ |
| ಸೂರ್ಯೋದಯ | : 05:55:50 |
| ಸೂರ್ಯಾಸ್ತ | : 19:10:53 |
| ರಾಹು | : 14:13–15:52 |
| ಯಮಘಂಡ | : 05:56–07:35 |
| ಗುಳಿಕ | : 09:15–10:54 |

## ತುಂಗಭದ್ರಾ ನೀರಿನ ಮಟ್ಟ



**ಬುಧವಾರ : 24–07–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1630.75 ಅಡಿ |
| ಒಳ ಹರಿವು | 84115 ಕ್ಯುಸೆಕ್ |
| ಹೊರ ಹರಿವು | 14791 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 96.914 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1602.84 ಅಡಿ |
| ಒಳ ಹರಿವು | 47294 ಕ್ಯುಸೆಕ್ |
| ಹೊರ ಹರಿವು | 213 ಕ್ಯುಸೆಕ್ |
| ಸಾಮರ್ಥ್ಯ | 25.417 ಟಿಎಂಸಿ |

# ಉಪೇಕ್ಷಿತ ಸಾಹಿತ್ಯದ ಮೇಲೆ ಬೆಳಕು ಚೆಲ್ಲಿದ ರವೀಂದ್ರನಾಥ

### ಬೆಂಗಳೂರು ವಿವಿ ಪ್ರಾಧ್ಯಾಪಕ ಡಾ. ಸಿ. ನಾಗಭೂಷಣ ಅಭಿಮತ



■ **ಹಂಪಿ ಟೈಮ್ಸ್ ಹೊಸಪೇಟೆ**

ನಿವೃತ್ತಿಯಾಗುವುದರೊಳಗೆ 70ಕ್ಕೂ ಹೆಚ್ಚು ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ ಡಾ. ಕೆ. ರವೀಂದ್ರನಾಥ ಅವರು ಉಪೇಕ್ಷಿತ ಮತ್ತು ಮಧ್ಯಕಾಲೀನ ಸಾಹಿತ್ಯ, ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲಿದ್ದಾರೆ ಎಂದು ಬೆಂಗಳೂರಿನ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಸಿ. ನಾಗಭೂಷಣ ಹೇಳಿದರು.

ಕನ್ನಡ ವಿವಿಯಲ್ಲಿ ಸೋಮವಾರ ಹಸ್ತಪ್ರತಿಶಾಸ್ತ್ರ ವಿಭಾಗದ ಸಂಶೋಧನ ವಿದ್ಯಾರ್ಥಿಗಳು ಆಯೋಜಿಸಿದ್ದ ಹಸ್ತಪ್ರತಿಶಾಸ್ತ್ರ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಡಾ.ಕೆ.ರವೀಂದ್ರನಾಥ ಅವರ ಸೇವಾ ನಿವೃತ್ತಿ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದರು. ಕೃತಿಗಳನ್ನು ಸಮಗ್ರವಾಗಿ ಸಮೀಕ್ಷೆ ಮಾಡಿದ್ದಾರೆ. ಕನ್ನಡ ವಿದ್ವತ್ ಪರಂಪರೆಯಲ್ಲಿ ಡಾ. ಚಿದಾನಂದಮೂರ್ತಿ, ಡಾ. ಎಂ.ಎಂ. ಕಲಬುರ್ಗಿ, ಡಾ. ವೆಂಕಟಾಚಲಶಾಸ್ತ್ರೀ, ಡಾ. ವಿದ್ಯಾಶಂಕರ, ಡಾ. ಹಂಪನಾ, ಡಾ. ಎಲ್ ಬಸವರಾಜು ಅವರನ್ನು ಇಲ್ಲಿ ನೆನಪು ಮಾಡಿಕೊಳ್ಳಬೇಕು ಯಾಕೆಂದರೆ ಅವರ ಪರಂಪರೆಯನ್ನು ಮುಂದುವರೆಸಿದವರಲ್ಲಿ ಪ್ರೊ. ಕೆ. ರವೀಂದ್ರನಾಥ ಅವರು ಒಬ್ಬರು ಎಂದರು.

ಕನ್ನಡ ವಿವಿ ಕುಲಪತಿ ಡಾ.ಡಿ.ಪರಮಶಿವಮೂರ್ತಿ ಅಧ್ಯಕ್ಷತೆವಹಿಸಿ ಮಾತನಾಡಿ, ನಾನು ಮತ್ತು ಪ್ರೊ. ರವೀಂದ್ರನಾಥ ಅವರು ಏಕಕಾಲಕ್ಕೆ 1997ರಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅಧ್ಯಾಪಕರಾಗಿ ಬಂದೆವು. ಹಸ್ತಪ್ರತಿಶಾಸ್ತ್ರ ವಿಭಾಗ ಹಾಗೂ ಅಲ್ಲಿಯ ವಿದ್ಯಾರ್ಥಿಗಳನ್ನು ಕಳೆದ ಮೂರು ದಶಕಗಳ ಕಾಲ ಬೆಳಸಿದ ಹೆಗ್ಗಳಿಕೆ ಡಾ. ಕೆ. ರವೀಂದ್ರನಾಥ ಅವರದು. ಹಸ್ತಪ್ರತಿ ಮತ್ತು ಗ್ರಂಥ ಸಂಪಾದನೆಗೆ ಸಂಬಂಧಿಸಿದಂತೆ ಮಹತ್ವದ ಕೃತಿಗಳನ್ನು ರಚಿಸಿರುವುದು ಅವರ ವಿದ್ವತ್ತಿಗೆ ನಿದರ್ಶನವಾಗಿದೆ ಎಂದು ಅಭಿಪ್ರಾಯಪಟ್ಟರು.

ಸಂಕೇಶ್ವರದ ವಿಶ್ರಾಂತ ಪ್ರಾಧ್ಯಾಪಕ, ಹಿರಿಯ ವಿದ್ವಾಂಸರಾದ ಡಾ. ಗುರುಪಾದ ಮರಿಗುದ್ದಿ ಅವರು ಡಾ. ಕೆ. ರವೀಂದ್ರನಾಥ ಅವರ ಕುರಿತು ಅಭಿನಂದನ ನುಡಿಗಳನ್ನು ಆಡಿದರು. ಪ್ರಾಧ್ಯಾಪಕರಾದವರು ವಿದ್ಯಾರ್ಥಿಗಳ ಸಮಸ್ಯೆಗೆ ಸ್ಪಂದಿಸುವುದು ಮತ್ತು ಅವರ ಬೆಳವಣಿಗೆಗೆ ಮಾರ್ಗದರ್ಶನ ಮಾಡುವುದು ಅವರ ಆದ್ಯ ಕರ್ತವ್ಯ. ಇದಕ್ಕೆ ಉದಾಹರಣೆಯಾಗಿ ಕೆ.ಜಿ. ಕುಂದಣಗಾರ ಅವರಂಥ ವಿದ್ಯಾರ್ಥಿಸ್ನೇಹಿ ಪ್ರಾಧ್ಯಾಪಕರು ಇದ್ದಾರೆ. ಆ ರೀತಿಯ ವಿದ್ಯಾರ್ಥಿಸ್ನೇಹಿಯಾಗಿ ಡಾ. ಕೆ. ರವೀಂದ್ರನಾಥ ಅವರನ್ನು ನಾನು ಕಂಡುಕೊಂಡಿದ್ದೇನೆ.

ಇದೇ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ. ವಿಜಯ ಪೂಣಚ್ಚ ತಂಬಂಡ ಮಾತನಾಡಿ ಒಬ್ಬ ಅಧ್ಯಯನಶೀಲ ಪ್ರಾಧ್ಯಾಪಕನಿಗೆ ಸಲ್ಲಬೇಕಾದ ಗೌರವವನ್ನು ಅವರ ವಿದ್ಯಾರ್ಥಿಗಳು ಈ ಕಾರ್ಯಕ್ರಮದ ಮೂಲಕ ಸಲ್ಲಿಸಿದ್ದಾರೆ. ಮೂರು ದಶಕಗಳ ಕಾಲ ಕನ್ನಡ ವಿಶ್ವವಿದ್ಯಾಲಯದ ಸಂದಿಗ್ಧ ಸಂದರ್ಭಗಳಲ್ಲಿ ಅದರ ಬೆಳವಣಿಗೆಗೆ ಆಡಳಿತಾಂಗದ ಪರವಾಗಿ ನಿಂತು ಕೆಲಸ ಮಾಡಿರುವುದನ್ನು ನಾನು ಹತ್ತಿರದಿಂದ ಕಂಡಿದ್ದೇನೆ ಎಂದರು. ಹಾಗೂ ಭಾಷಾ ನಿಕಾಯದ ಡೀನರಾದ ಹಳ್ಳಿಕೇರಿಯವರು ಮಾತನಾಡಿ, ಹಸ್ತಪ್ರತಿ ಸಂಗ್ರಹ, ಸಂರಕ್ಷಣೆ, ವಿಭಾಗದ ಕಾರ್ಯಚಟುವಟಿಕೆಗಳಲ್ಲಿ ಡಾ. ಕೆ. ರವೀಂದ್ರನಾಥ ಅವರೊಂದಿಗಿನ ಸಂಬಂಧವನ್ನು ನೆನಪು ಮಾಡಿಕೊಂಡರು.

ಡಾ. ವಿರೂಪಾಕ್ಷಿ ಎನ್.ಬಿ. ಸ್ವಾಗತಿಸಿದರು. ಡಾ. ಕೇಶವಮೂರ್ತಿ ಪ್ರಾಸ್ತಾವಿಕ ಮಾತನಾಡಿದರು. ಡಾ. ಕಲ್ಲಯ್ಯ ಹಿರೇಮಠ ವಂದಿಸಿದರು. ಡಾ. ಜಿ. ಸಂತೋಷಕುಮಾರ ನಿರೂಪಿಸಿದರು. ಇದೇ ಸಂದರ್ಭದಲ್ಲಿ ಹಸ್ತಪ್ರತಿಶಾಸ್ತ್ರ ವಿಭಾಗದಲ್ಲಿ ಅಧ್ಯಯನ ಮಾಡಿದ ನೂರಾರು ಸಂಶೋಧನ ವಿದ್ಯಾರ್ಥಿಗಳು, ಡಾ. ಕೆ. ರವೀಂದ್ರನಾಥ ಅವರ ಬಂಧು–ಬಳಗದವರು, ವಿಶ್ವವಿದ್ಯಾಲಯದ ಬೋಧಕ–ಬೋಧಕೇತರ ಸಿಬ್ಬಂದಿಯವರು ಉಪಸ್ಥಿತರಿದ್ದರು.

# ತಾಲೂಕು ಸೌಧ ನಿರ್ಮಾಣಕ್ಕೆ 15 ಕೋಟಿ ರೂ. ಪ್ರಸ್ತಾವನೆ ಸ್ವೀಕೃತ

### ವಿಧಾನಪರಿಷತ್ ಸದಸ್ಯ ವೈ.ಎಂ. ಸತೀಶ್ ಹೇಳಿಕೆ

■ **ಹಂಪಿ ಟೈಮ್ಸ್ ಬೆಂಗಳೂರು**



ಬಳ್ಳಾರಿ ಜಿಲ್ಲೆಯ ಐದು ತಾಲೂಕುಗಳಲ್ಲಿ ಮತ್ತು ವಿಜಯನಗರ ಜಿಲ್ಲೆಯ ಆರು ತಾಲೂಕುಗಳಲ್ಲಿ ತಾಲೂಕು ಮಟ್ಟದ ಆಡಳಿತ ಸೌಧಗಳ ಅಗತ್ಯವಿದ್ದು, ಆದಷ್ಟು ಶೀಘ್ರದಲ್ಲಿ ಎಲ್ಲಾ 11 ತಾಲೂಕುಗಳಲ್ಲಿ ತಾಲೂಕು ಆಡಳಿತ ಸೌಧಗಳ ನಿರ್ಮಾಣಕ್ಕೆ ಅಗತ್ಯ ಕ್ರಮಕೈಗೊಳ್ಳಬೇಕು ಎಂದು ವಿಧಾನಪರಿಷತ್ ಸದಸ್ಯ ವೈ.ಎಂ. ಸತೀಶ್ ಅವರು ಆಗ್ರಹಿಸಿದ್ದಾರೆ.

ವಿಧಾನಪರಿಷತ್ ಸದಸ್ಯ ವೈ.ಎಂ. ಸತೀಶ್ ಅವರ ಪ್ರಶ್ನೆಗೆ ಉತ್ತರಿಸಿದ ಕಂದಾಯ ಸಚಿವ ಕೃಷ್ಣ ಭೈರೇಗೌಡ, ಕೊಟ್ಟೂರು ತಾಲೂಕಿನ ಒಟ್ಟು 2.61 ಎಕರೆ ಪ್ರದೇಶದಲ್ಲಿ 15 ಕೋಟಿ ರೂಪಾಯಿ ವೆಚ್ಚದಲ್ಲಿ ಆಡಳಿತ ಸೌಧ ನಿರ್ಮಾಣಕ್ಕೆ ಸ್ಥಳವನ್ನು ಗುರಿತಿಸಲಾಗಿದ್ದು, ಕಟ್ಟಡ ನಿರ್ಮಾಣಕ್ಕೆ ಅನುದಾನ ಬಿಡುಗಡೆಗಾಗಿ ಪ್ರಸ್ತಾವನೆ ಸರ್ಕಾರದಲ್ಲಿ ಸ್ವೀಕೃತವಾಗಿದೆ ಎಂದರು.

ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ಮತ್ತು ಸಂಡೂರು ತಾಲೂಕುಗಳಲ್ಲಿ ತಾಲೂಕು ಆಡಳಿತಸೌಧಗಳಿವೆ. ಕಂಪ್ಲಿ ಮತ್ತು ಕುರುಗೋಡು ತಾಲೂಕುಗಳಲ್ಲಿ ತಾಲೂಕು ಆಡಳಿತ ಸೌಧ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಶೀಘ್ರದಲ್ಲೇ ಕಟ್ಟಡ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳಲಿದೆ ಉತ್ತರಿಸಿದರು.

# ಐಎಎಸ್, ಕೆಎಎಸ್ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಸಾಲಿನ ಐಎಎಸ್, ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಸತಿ ಸಹಿತ ತರಬೇತಿ ನೀಡಲು, ಕರ್ನಾಟಕ ರಾಜ್ಯದ ಅರ್ಹ ಅಲ್ಪ ಸಂಖ್ಯಾತರ ಅಭ್ಯರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾದೆ. ಆಸಕ್ತ ಅಭ್ಯರ್ಥಿಗಳು ಅರ್ಜಿಯನ್ನು ಆನ್‌ಲೈನ್ https://sevasindhu.karnataka.gov.in, sevasindhu, departmentservices ವೆಬ್‌ಸೈಟ್ ಮೂಲಕ ಸಲ್ಲಿಸಬಹುದಾಗಿದೆ. ಅಭ್ಯರ್ಥಿಯು ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದವರಾಗಿರಬೇಕು. ಸರ್ಕಾರದಿಂದ ಶಾಸನಬದ್ಧ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ ಹೊಂದಿರಬೇಕು. ಕನಿಷ್ಠ 21 ಹಾಗೂ ಗರಿಷ್ಠ ವಯೋಮಿತಿ 35 ವರ್ಷಗಳು ಮೀರಿರಬಾರದು. ಕೇಂದ್ರ ಮತ್ತು ರಾಜ್ಯ ಸರ್ಕಾರದ ನೌಕರಿಯಲ್ಲಿರುವ ಅಭ್ಯರ್ಥಿಗಳು ಇದಕ್ಕೆ ಅರ್ಹರಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ http://dom.karnataka.gov.in ಅನ್ನು ವೀಕ್ಷಿಸಿ ಹಾಗೂ ಹತ್ತಿರದ ಜಿಲ್ಲಾ ಕಚೇರಿ ಮತ್ತು ಜಿಲ್ಲಾ ಹಾಗೂ ತಾಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಿಗೆ ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ತಿಳಿಸಿದಾರೆ.

# ಬೆಳೆ ವಿಮೆ ನೋಂದಣಿ ರೈತರಿಗೆ ಇದು ಸಕಾಲ

### ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿಕೆ। ಸುದ್ದಿಗೋಷ್ಠಿ ಕಾರ್ಯಕ್ರಮ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಮುಂಗಾರು ಆರಂಭವಾಗಿದ್ದು, ರೈತರು ಮುಂಜಾಗ್ರತಾ ಕ್ರಮವಾಗಿ ತಮ್ಮ ಬೆಳೆಗಳಿಗೆ ವಿಮೆ ಮಾಡಿಸಿಕೊಳ್ಳುವುದು ಸೂಕ್ತವಾಗಿದೆ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿದರು.

ಬುಧವಾರದಂದು, ಕೃಷಿ ಸಂಬಂಧಿತ ಬೆಳೆ ವಿಮೆ, ಮಳೆ ಹಾಗೂ ಪ್ರವಾಹ ಕುರಿತು ಕೈಗೊಳ್ಳಬೇಕಾದ ಕ್ರಮಗಳ ಕುರಿತು ನಗರದ ಅನಂತಪುರ ರಸ್ತೆಯ ನೂತನ ಪ್ರವಾಸಿ ಮಂದಿರ(ಐಬಿ)ದಲ್ಲಿ ಏರ್ಪಡಿಸಲಾಗಿದ್ದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ಪ್ರಸ್ತಕ ಸಾಲಿನ ಮುಂಗಾರು ಹಂಗಾಮಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ(ವಿಮಾ) ಯೋಜನೆ ಅನುಷ್ಠಾನಕ್ಕೆ ಮುಂದಾಗಿದ್ದು, ಪ್ರವಾಹ ಹಾಗೂ ಪ್ರಕೃತಿ ವಿಕೋಪದಿಂದ ಬೆಳೆ ನಷ್ಟ ಸಂಭವಿಸಿದರೆ ರೈತರು ಪರಿಹಾರ ಪಡೆಯಲು ನೋಂದಾಯಿಸಿಕೊಳ್ಳಬೇಕಿದ್ದು, ವಿಮೆ ನೋಂದಣಿಗೆ ಇದು ಸಕಾಲವಾಗಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ 1.6 ಲಕ್ಷ ರೈತರಿದ್ದು, ಇದರಲ್ಲಿ ಕೇವಲ 1,263 ರೈತರು ಮಾತ್ರ ತಮ್ಮ ಬೆಳೆಗಳಿಗೆ ವಿಮೆ ಮಾಡಿಸಿಕೊಂಡಿದ್ದಾರೆ. ಇನ್ನು ಹೆಚ್ಚು ಹೆಚ್ಚು ರೈತರು ಬೆಳೆ ವಿಮೆಗೆ ನೋಂದಣಿ ಮಾಡಿಸಿಕೊಳ್ಳುವಂತೆ ಗ್ರಾಪಂ ವ್ಯಾಪ್ತಿಯಲ್ಲಿ ಜಾಗೃತಿ ನೀಡಲಾಗುತ್ತಿದೆ. ಆಯಾ ತಾಲ್ಲೂಕು ತಹಶೀಲ್ದಾರರಿಗೂ ವ್ಯಾಪಕ ಪ್ರಚಾರ ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ ಎಂದರು.

ಮುಸುಕಿನ ಜೋಳ, ಜೋಳ, ಸೂರ್ಯಕಾಂತಿ, ತೊಗರಿ, ಹತ್ತಿ, ಕೆಂಪು ಮೆಣಸಿನ ಕಾಯಿ ಹಾಗೂ ಈರುಳ್ಳಿ ಬೆಳೆಗಳಿಗೆ ವಿಮೆಗಾಗಿ ನೊಂದಾಯಿಸಲು ಜುಲೈ 31 ಮತ್ತು ಮಳೆಯಾಶ್ರಿತ ಬೆಳೆಗಳಾದ ರಾಗಿ, ನವಣೆ, ಹುರುಳಿ, ನೆಲಗಡಲೆ ಹಾಗೂ ನೀರಾವರಿ ಬೆಳೆಗಳಾದ ಸಜ್ಜೆ, ತೊಗರಿ, ಭತ್ತ ಬೆಳೆಗಳಿಗೆ ಆಗಸ್ಟ್ 16 ರವರೆಗೆ ವಿಮೆಗೆ ನೋಂದಾಯಿಸಿಕೊಳ್ಳಲು ಅವಕಾಶ ಇರುತ್ತದೆ. ಆಸಕ್ತ ರೈತರು ಸಮೀಪದ ರೈತ ಸಂಪರ್ಕ ಕೇಂದ್ರಗಳು, ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ಕಚೇರಿ ಅಥವಾ



ಬ್ಯಾಂಕ್‌ಗಳನ್ನು ಸಂಪರ್ಕಿಸಿ ಮಾಹಿತಿ ಪಡೆದು ವಿಮೆಗೆ ನೋಂದಾಯಿಸಿ ಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ಕಂದಾಯ ಸಚಿವರ ಸೂಚನೆಯಂತೆ, ಸಣ್ಣ, ಅತಿಸಣ್ಣ ರೈತರನ್ನು ಗುರುತಿಸಲು ಮತ್ತು ಬೆಳೆ ಪರಿಹಾರ ವಿತರಣೆ ಅನುಕೂಲವಾಗುವಂತೆ, ರೈತರ ಪಹಣಿಗಳಿಗೆ ಆಧಾರ್ ಜೋಡಣೆ ಮಾಡುವ ಕಾರ್ಯ ನಡೆಯುತ್ತಿದೆ. ಜಿಲ್ಲೆಯಲ್ಲಿ ಈಗಾಗಲೇ ಶೇ.78 ರಷ್ಟು ಪೂರ್ಣಗೊಂಡಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಸರ್ಕಾರಿ ಜಮೀನು ಒತ್ತುವರಿ, ಅತಿಕ್ರಮಣ, ಭೂಗಳ್ಳರಿಂದ ಸಂರಕ್ಷಿಸಲು ಕಂದಾಯ ಇಲಾಖೆಯು "ಲ್ಯಾಂಡ್ ಬೀಟ್" ಎಂಬ ಹೊಸ ತಂತ್ರಾಂಶ ಅಭಿವೃದ್ಧಿಪಡಿಸಿದೆ. ಕಂದಾಯ ಇಲಾಖೆಯಡಿ ಬರುವ ಸರ್ಕಾರ, ಗೋಮಾಳ ಸೇರಿದಂತೆ ಸರ್ಕಾರಿ ಆಸ್ತಿಗಳ ಭೌಗೋಳಿಕ ಗಡಿ ಮತ್ತು ಸರ್ವೇ ನಂಬರ್ ಒಳಗೊಂಡ ಮಾಹಿತಿಯ ಡಿಜಿಟಲ್ ದಾಖಲೆಗಳನ್ನು ಈ ತಂತ್ರಾಂಶ ಹೊಂದಲಿದೆ. ಜಿಲ್ಲೆಯಲ್ಲಿ ಇದಕ್ಕಾಗಿ 55 ಸಾವಿರ ಆಸ್ತಿ ಗುರುತಿಸಲಾಗಿದ್ದು, ಶೇ. 76 ರಷ್ಟು ಆಸ್ತಿಗಳಿಗೆ ಜಿಪಿಎಸ್ ದತ್ತಾಂಶ ತೆಗೆದುಕೊಳ್ಳಲಾಗಿದೆ. ಸರ್ಕಾರಿ ಆಸ್ತಿ ಒತ್ತುವರಿ ತೆರವು ಪ್ರಕರಣಗಳಲ್ಲಿ ಇದರಿಂದ ಅನುಕೂಲವಾಗಲಿದೆ ಎಂದರು.

ಆರ್.ಟಿ.ಸಿ. ಮಾಲೀಕರ ಮರಣ ಪ್ರಕರಣ ಗಳಲ್ಲಿ ಆಸ್ತಿಯನ್ನು ಅವರ ಕುಟುಂಬಸ್ಥರ ಅಥವಾ ವಾರಸುದಾರರ ಹೆಸರಿನಲ್ಲಿ ವರ್ಗಾಯಿಸಲು ಜಿಲ್ಲೆಯಲ್ಲಿ ವಿಶೇಷವಾಗಿ ಪೌತಿ ಖಾತೆ ಅಭಿಯಾನ ನಡೆಸಲಾಗುವುದು ಎಂದು ಡಿಸಿ ಮಿಶ್ರಾ ತಿಳಿಸಿದರು.

**ಪ್ರವಾಹ ಎದುರಿಸಲು ಜಿಲ್ಲಾಡಳಿತ ಸನ್ನದ್ಧ:** ಜಲಾನಯನ ಪ್ರದೇಶಗಳಲ್ಲಿ ಹೆಚ್ಚು ಮಳೆಯಾಗುತ್ತಿರುವುದರಿಂದ ತುಂಗಭದ್ರಾ ಜಲಾಶಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಒಳಹರಿವು ಹರಿದು ಬರುತ್ತಿದೆ. ಯಾವುದೇ ಕ್ಷಣದಲ್ಲಾದರೂ ತುಂಗಭದ್ರಾ ಜಲಾಶಯದಿಂದ ನೀರು ಹರಿಸುವ ಸಾಧ್ಯತೆ ಇದ್ದು, ನದಿ ಪಾತ್ರದ ಗ್ರಾಮಗಳಿಗೆ ಡಂಗೂರ ಮೂಲಕ ಜಾಗ್ರತೆ ವಹಿಸುವಂತೆ ಪ್ರಚಾರ ನೀಡಲಾಗುತ್ತಿದ್ದು, ಸಂಭವನೀಯ ಪ್ರವಾಹ, ಬೆಳೆ ಹಾನಿ ತಡೆಗಟ್ಟಲು ಜಿಲ್ಲಾಡಳಿತ ಅಗತ್ಯ ಸಿದ್ಧತೆ ಮಾಡಿಕೊಂಡಿದೆ ಎಂದು ಡಿಸಿ ಮಿಶ್ರಾ ಅವರು ಹೇಳಿದರು.

ಮಳೆ ನೀರಿನಿಂದ, ನಿಂತ ನೀರು ಸಾಂಕ್ರಾಮಿಕ ರೋಗಗಳು ಉಂಟಾಗುವ ಸಾಧ್ಯತೆ ಇದ್ದು, ಈ ಕುರಿತು ಡೆಂಗ್ಯೂ, ಮಲೇರಿಯಾ ಸೇರಿದಂತೆ ಇತರ ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕೆ ಸಾರ್ವಜನಿಕರು ಅನುಸರಿಸಬೇಕಾದ ಕ್ರಮಗಳ ಕುರಿತು ಹೆಚ್ಚಿನ ಜಾಗೃತಿ ಮೂಡಿಸಬೇಕೆಂದು ಆರೋಗ್ಯ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಡೆಂಗ್ಯೂ ಪ್ರಕರಣಗಳಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಈವರೆಗೆ 114 ಪ್ರಕರಣಗಳು ದಾಖಲಾಗಿದ್ದು, ಪ್ರಸ್ತುತ 23 ಜನ ಚಿಕಿತ್ಸೆ ಪಡೆಯುತ್ತಿದ್ದಾರೆ. ಉಳಿದವರು ಗುಣಮುಖರಾಗಿದ್ದಾರೆ. ಡೆಂಗ್ಯು ರೋಗ ಹರಡುವ ಈಡಿಸ್ ಸೊಳ್ಳೆ ನಿರ್ಮೂಲನೆಗೆ ವಾರದಲ್ಲಿ ಶುಕ್ರವಾರ ಒಂದು ದಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಆರೋಗ್ಯ ಇಲಾಖೆ ಬೆಂಬಲದೊಂದಿಗೆ ಮನೆ ಭೇಟಿ ನಡೆಸಿ ಸೊಳ್ಳೆ ಲಾರ್ವ ನಾಶಪಡಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭರಾಣಿ.ವಿ.ಜೆ., ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್ ಉಪಸ್ಥಿತರಿದ್ದರು.

**SSLC** ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi

ಮನಸ್ಸು ಮಾಡು – ಕರ್ತವ್ಯ ನಿಷ್ಟನಾಗು – ಕಾದು ನೋಡು

SCAN & READ E-PAPER

## SUBJECT: ENGLISH

# A HERO

**Read the following extracts and answer the questions that follow:-**

**8 . "No wonder he wanted to be asleep before I could return home. Clever boy!"**
a. Who do the words "I" and "Clever boy" refer to?
"I" refers to father and clever boy refers to swami
b. Why had swami gone to sleep before his father's return?
Swami still did not have courage to sleep alone. He was afraid his father would force him to sleep alone.
c. Was his father angry with him? Give a reason for your answer.
No, he was not angry with him. This might have been said affectionately.

**9. "Congratulations were showered".**
a. Who was congratulated?
Swami
b. Why was he congratulated?
The burglar was caught because of Swami
c. What was the impact on Swami?
He became a hero among his friends.

**10 . The inspector said, "Why don't you join the police when you are grown up?**
a. Why do you think the inspector said this?
The inspector thought that Swami was a brave boy so he said this.
b. Do you feel Swami would be happy to do so?
He was not happy. He did not want to join the police.
c. What did he want to become?
He wanted to become an engine driver, a railway guard or a bus conductor

**11 ."Aiyo, something has bitten me."**
a. Who does "me" refer to?
Burglar/house breaker
b. Why was he bitten?
Swami mistook him to be devil, to save himself, he bit the burglar.
c. What was the result of it?
The burglar was caught

**12. "Your office room is very dusty and there may be scorpions behind your law books".**
a. who does the word "your" refer to here?
Swami's father
b. Why did Swami make this remark?
He wanted an excuse for not sleeping in the office room.
c. What does it reveal about his character?
He did not have the courage.

**13. " I' ll make you the ' laughing stock' of your school" ( 4 APRIL 2023 )**
a. Who is the 'I' referred to here ?
Swami's father.
b . What does laughing stock mean ?
An object of redicule .
C . Why did he say so ?
To make swami sleep in office room

**Q. 1. Narrate how Swami became a hero overnight**

**Ans:** Swami was forced to sleep alone in the office-room. His father wanted that he should not be afraid of darkness. When he slept there was absolute silence and in spite of it, some noises reached Swami's ears. Frightening, Swami spread his bed under the bench.He was racked with nightmares like a tiger was chasing him and he tried to escape and the nightmare continued. He groaned in despair. He put his hand out to feel his granny's presence but he touched the wooden leg of the bench. When he felt something was rustling and moving he thought his end had come. He thought that the devil would pull him out. He hugged it tightly and had used his teeth on it like a mortal weapon. The burglar cried in pain. His father, cook and servant rushed to the room The burglar was handed over to the police. So Swami became a hero overnight.

(Continued)

www.hampitimes.com - Hampi Times Margadarshi

Prepared by : **Guru Hiremath** , English Language Teacher, S.G.S. High School Kadalabalu. H.B. halli Tq

ಶ್ರೀ ಜಗದ್ಗುರು ಕೊಟ್ಟೂರು ಸಂಸ್ಥಾನ ಮಠ, ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA